# ಬುನಾದಿ ಶಿಕ್ಷಣದ ಸಾರಸತ್ವ

**ಹೃದಯಕಾಂತ್ ದಿವಾನ್**



### ಹಿನ್ನೆಲೆ

ಬೆಳೆಯುತ್ತಿರುವ ವಿದ್ಯಾರ್ಥಿಯು ಸಮಾಜದೊಳಗೆ ವಿಲೀನವಾಗುವಂತೆ ಮಾಡುವುದೇ, ಜೊತೆಗೇ ಅವನು ಸಮಾಜದಲ್ಲಿ ಪರಿವರ್ತನೆಯನ್ನು ತರುವ ಆಕಾಂಕ್ಷೆ, ಸಾಮರ್ಥ್ಯ ಹಾಗು ಸಾಧ್ಯತೆಗಳನ್ನು ಹೊಂದಿರುವಂತೆ ಅವನನ್ನು ಜೀವನಕ್ಕೆ ಸಜ್ಜುಗೊಳಿಸುವುದೇ ಶಿಕ್ಷಣ ಎಂದು ಪರಿಗಣಿಸಲಾಗಿದೆ. ಇವತ್ತಿನ ನಮ್ಮ ಶಿಕ್ಷಣಕ್ಕೆ, ಮಕ್ಕಳು ತಮ್ಮ ಮೂಲಬೇರುಗಳಿಂದ ದೂರ ಸರಿದು ಹೋಗದಂತೆ ತಡೆಯಲು ಆಗುತ್ತಿಲ್ಲ. ದೈಹಿಕ ಶ್ರಮ, ಸಾಹಸೋದ್ಯಮದ ಅಪಾಯ ಸಾಧ್ಯತೆ, ಸಾಮಾಜಿಕ ಜವಾಬ್ದಾರಿಗಳು ಮತ್ತು ಸಹೋದ್ಯೋಗಿಗಳೊಡನೆ ಒಂದುಗೂಡಿ ಕೆಲಸ ಮಾಡುವುದು – ಇವು ಯಾವುವೂ ಅವಶ್ಯವಿಲ್ಲದಂತಹ ವೃತ್ತಿಗಳನ್ನೇ ಅವರು ಆಶಿಸುತ್ತಿದ್ದಾರೆ. ಅವರು ಹೆಚ್ಚು ಹೆಚ್ಚು ಒಂಟಿಯೂ, ಪರಕೀಯರೂ ಆಗುತ್ತಿರುವುದಲ್ಲದೇ ಅನುಭವ, ನಿಲುವು ಮತ್ತು ಭಾವನೆಗಳನ್ನು ಕುರಿತು ಅವರು ಆಲೋಚಿಸುವುದು ಮತ್ತು ಅವನ್ನು ಕೈಗೊಳ್ಳುವುದು ಯಾಂತ್ರಿಕವಾಗುತ್ತಿವೆ. ಜ್ಞಾನಗ್ರಹಣದ ಅಂಶಗಳಿಗೇ ಮತ್ತು ಯಾಂತ್ರಿಕ ವೈಚಾರಿಕತೆಗೆ ಎಷ್ಟು ಬಲವಾಗಿ ಅತಿರೇಕದ ಒತ್ತು ನೀಡಲಾಗುತ್ತಿದೆ ಎಂಬುದು ನಮ್ಮ ಅನುಭವಕ್ಕೆ ಬರುತ್ತಿದೆ.

ವೈಚಾರಿಕತೆ ಮೌಲ್ಯಉಳ್ಳದ್ದೇ ಆದರೂ ಅದು ನಿರಂಕುಶವಾಗಿರುವುದಿಲ್ಲ ಅಥವಾ ತಾನೊಂದೇ ಮೌಲ್ಯ ಉಳ್ಳದ್ದಾಗುವುದಿಲ್ಲ ಅದು ನೈತಿಕತೆ ಮತ್ತು ಸಂವೇದನಾಶೀಲತೆಗಳಿಂದ ಹದಗೊಂಡಿರಬೇಕು. ಶಾಲೆಯ ಪಾಠಕ್ರಮದಲ್ಲಿಯೂ ಮಗುವಿನಲ್ಲಿ ಜವಾಬ್ದಾರಿಯ ಪ್ರಜ್ಞೆಯನ್ನು ಅಂದರೆ ಶಾಲೆಯ ಬಗ್ಗೆ, ಓರಿಗೆಯವರ ಬಗ್ಗೆ ಮತ್ತು ತನ್ನ ಬದುಕಿನ ಬಗ್ಗೆಯೂ ಜವಾಬ್ದಾರಿಯ ಪ್ರಜ್ಞೆಯನ್ನು ಬೆಳೆಸುವುದು ಸೇರಿಲ್ಲ. ತಾನು ಮಾಡುವ ಕೆಲಸವನ್ನು ಆನಂದಿಸುವುದು, ಸರಳ ಜೀವನವನ್ನು ಆಯ್ಕೆ ಮಾಡಿಕೊಳ್ಳುವುದನ್ನು ಬಿಟ್ಟು ಜನರು ಐಹಿಕ ಕೊಳ್ಳುಬಾಕತನ ಮತ್ತು ವಿರಾಮದೆಡೆಗೆ ಹೆಚ್ಚಾಗಿ ಹೊರಳುತ್ತಿದ್ದಾರೆ. ಬುನಾದಿ ಶಿಕ್ಷಣವು ಇವೆಲ್ಲವುಗಳನ್ನು ಕುರಿತು ಪರಿಗಣಿಸಬೇಕು ಮತ್ತು ಅದು ಈ ಕೆಲವು ಸಮಸ್ಯೆಗಳನ್ನು ಪರಿಹರಿಸುವ ಒಂದು ವಿಧಾನವೂ ಹೌದು ಎಂಬ ವಾದವೂ ಇದೆ.

### ಶಿಕ್ಷಣದ ಮೂಲಕವೇ ಏಕೆ ಅದೂ ಬುನಾದಿ ಶಿಕ್ಷಣದ ಹಂತದಲ್ಲೇ ಏಕೆ ಮುಖ್ಯ?

ಈ ವಿಷಯವನ್ನು ಪರಿಗಣಿಸುವಾಗ ಶಿಕ್ಷಣದ ವಿಚಾರವನ್ನು ಅದರ ರಾಜಕೀಯ, ಸಾಮಾಜಿಕ ಮತ್ತು ಚಾರಿತ್ರಿಕ ಸಂದರ್ಭಗಳಿಂದ ಹೊರತಾಗಿ ನೋಡುವುದು ತಪ್ಪಾಗುತ್ತದೆ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಶಿಕ್ಷಣವು ಈ ಮೂರು ಅಂಶಗಳಿಂದ ಪ್ರಭಾವಕ್ಕೊಳಗಾಗಿದೆ ಎಂದರಷ್ಟೇ ಸಾಲದು. ಈ ಮೂರೂ ಅಂಶಗಳೇ ಶಿಕ್ಷಣವನ್ನು ಮುನ್ನಡೆಸುತ್ತಿವೆ ಎಂಬುದನ್ನು ಗಮನಿಸಬೇಕು. ಶಿಕ್ಷಣದ ಉದ್ದೇಶ ಮತ್ತು ಬೆಂಬಲ ಮತ್ತೆಲ್ಲವೂ ಆ ಬಗ್ಗೆ ಈ ಪ್ರತಿಪಾದಕರು ಏನು ಅರ್ಥಮಾಡಿಕೊಂಡಿದ್ದಾರೆ ಎಂಬುದರಿಂದಲೇ ಹೊರಹೊಮ್ಮುತ್ತವೆ. ಶಿಕ್ಷಣದ ಪರಿಕಲ್ಪನೆಯನ್ನು ರೂಪಿಸುವಲ್ಲಿ ಹಾಗೂ ಕಾರ್ಯಗತಗೊಳಿಸುವಲ್ಲಿ ಈ ಅಂಶಗಳೇ ಸೈದ್ಧಾಂತಿಕ ಅಡಿಪಾಯ ಮತ್ತು ಆಧಾರಶಿಲೆಗಳು. ಬುನಾದಿ ಶಿಕ್ಷಣದ ಪ್ರಸ್ತುತತೆಯನ್ನು ಕುರಿತು ಬಹಳಷ್ಟು ಬರೆಯಲಾಗಿದೆ ಹಾಗೂ ಅದರ ನಿಜವಾದ ಉದ್ದೇಶದ ಬಗ್ಗೆ ಬಹಳಷ್ಟು ಚರ್ಚೆಗಳಾಗಿವೆ.

ಈ ವಿಚಾರವನ್ನು ಹಲವಾರು ರೀತಿಯಲ್ಲಿ, ಹಲವಾರು ಸಂದರ್ಭಗಳಿಗೆ ತಕ್ಕಂತೆ ವ್ಯಾಖ್ಯಾನಿಸಲಾಗಿದೆ. ಇದು ಹೊಸ ತತ್ವಗಳ ಸಂಗ್ರಹವೋ ಅಥವಾ ಈಗಾಗಲೇ ತಿಳಿದಿರುವ ಹಳೆ ಸೂತ್ರಗಳ ಸಂಯೋಜನೆಯೋ ಎಂಬ ನಿಟ್ಟಿನಲ್ಲಿಯೂ ಕೂಡ ಪರಿಶೀಲಿಸಲಾಗಿದೆ. ಬುನಾದಿ ಶಿಕ್ಷಣವು ರೂಪಗೊಂಡ ಬಗ್ಗೆ ಸಾಗುತ್ತಿರುವ ಈ ಚರ್ಚೆಯಲ್ಲಿ, ಭಾರತೀಯ ಸಮಾಜದ ಚಾರಿತ್ರಿಕ ಸಂದರ್ಭಗಳು ಮತ್ತು ದೇಶದ ಒಳಗೆ ಹಾಗು ಹೊರಗೆ ನಡೆದ ಬದಲಾವಣೆ ಹಾಗೂ ಬೆಳವಣಿಗೆಗಳಿಗೆ ಪ್ರತಿಸ್ಪಂದಿಸಿದ ಬಗೆಯನ್ನು ಕೂಡ ಪರಿಶೀಲಿಸಬೇಕಾಗಿದೆ. ಉದಾಹರಣೆಗೆ, ಶಿಕ್ಷಣವನ್ನು ಪ್ರಜಾತಂತ್ರಾತ್ಮಕಗೊಳಿಸುವ ಉದಾತ್ತ ಆಶಯಕ್ಕಿಂತಲೂ ಹೆಚ್ಚಾಗಿ ಆರ್ಥಿಕ ಹಿತಾಸಕ್ತಿಯ ವಿಸ್ತರಣೆಯು ಶಿಕ್ಷಣದ ಪ್ರಕ್ರಿಯೆಯನ್ನು ಹೆಚ್ಚು ಜನರಿಗೆ ವಿಸ್ತರಿಸುವ ಅಗತ್ಯವನ್ನು ಹುಟ್ಟುಹಾಕಿತು ಎಂದು ವಾದಿಸಬಹುದು. ಹೀಗಿದ್ದರೂ, ಕೇವಲ ಕೆಲವೇ ಪಂಗಡದವರು ಮಾತ್ರ ಓದಲು, ಬರೆಯಲು ಹಾಗೂ ಜ್ಞಾನಿಗಳಾಗಲು ಪಾತ್ರರಲ್ಲ ಎಂಬುದನ್ನು ಒಪ್ಪಿಕೊಂಡಿರುವುದನ್ನು ಶಿಕ್ಷಣ ವ್ಯವಸ್ಥೆಯ ವಿಸ್ತರಣೆಯು ಇಂಗಿತವಾಗಿ ಸೂಚಿಸುತ್ತದೆ

ಎಂಬುದನ್ನು ಅಲ್ಲಗಳೆಯಲಾಗದು. ಹೆಚ್ಚು ಜನರು ಶಿಕ್ಷಣ ಪಡೆಯುವುದನ್ನು ಸಮಾಜವು ಒಪ್ಪಿಕೊಳ್ಳುತ್ತಾ ಹೋದಂತೆ, ಯಾರು ಅವರಿಗೆ ಶಿಕ್ಷಣವನ್ನು ನೀಡಬೇಕು, ಶಿಕ್ಷಣವು ಏನನ್ನು ಒಳಗೊಂಡಿರತಕ್ಕದ್ದು, ಶಿಕ್ಷಣವನ್ನು ನೀಡಲಾಗುವ ಸ್ಥಳದ, ರಾಚನಿಕ ಸ್ವರೂಪ ಏನು, ಶಿಕ್ಷಣ ಕಲಿಸಿ ಕೊಡುವ ವಿಧಾನ ಯಾವುದು ಇವೆಲ್ಲವುಗಳ ಬಗೆಗಿನ ಚರ್ಚೆ ಕೂಡ ಬೆಳೆಯಿತು. ಶಿಕ್ಷಣದ ಧ್ಯೇಯ ಮತ್ತು ಉದ್ದೇಶ, ಅದರ ಆಡಳಿತ ನಿರ್ವಹಣೆ, ನಿಯಂತ್ರಣ ಮತ್ತು ನಿರ್ಧಾರ ತೆಗೆದುಕೊಳ್ಳುವಿಕೆ, ಶಿಕ್ಷಣಕ್ಕೆ ಬೇಕಾದ ಹಣಕಾಸು, ಅದರ ಮೂಲ ಹಾಗೂ ಸ್ವರೂಪ, ಶಿಕ್ಷಕರನ್ನು ಕುರಿತಾದ ಪರಿಕಲ್ಪನೆ, ವಿದ್ಯಾರ್ಥಿಗಳು ಮತ್ತು ಸಮುದಾಯದೊಡನೆ ಅವರ ಸಂಬಂಧ – ಇವೆಲ್ಲವೂ ಸಂವಾದದ ಮತ್ತು ವಾಗ್ವಾದದ ಭಾಗಗಳಾದವು. ಅವು ಚರ್ಚೆಯ ವ್ಯಾಪ್ತಿಯನ್ನು, ಶಿಕ್ಷಣವನ್ನು ಕಾರ್ಯಕಾರಿ ಆರ್ಥಿಕ ಉದ್ದೇಶಗಳಿಗೆ ಸೀಮಿತಗೊಳಿಸಬೇಕೆಂದು ಪ್ರಯತ್ನಿಸುತ್ತಿದ್ದವರ ವಲಯದಿಂದ ಹೊರಗೊಯ್ದವು.

ವಿಶಾಲ ವ್ಯಾಪ್ತಿಗೆ ಒದಗಿಸುವ ಶಿಕ್ಷಣದ ಧ್ಯೇಯ ಮತ್ತು ಪರಿಣಾಮಗಳ ಸುತ್ತಲಿನ ಸೆಣಸಾಟ ಈಗಲೂ ಮುಂದುವರೆದಿದೆ ಹಾಗೂ ಇದು ಬುನಾದಿ ಶಿಕ್ಷಣವನ್ನು ನೋಡುವ ರೀತಿಯ ಮೇಲೂ ಪರಿಣಾಮ ಬೀರುತ್ತಿದೆ. ಈ ಪ್ರಶ್ನೆಗಳು, ದೇಶಕ್ಕೆ ಅಥವಾ ಅದಕ್ಕೂ ವಿಶಾಲವಾದ ಕ್ಷೇತ್ರಕ್ಕೆ ಬೇಕಾಗಿರುವ ಶಿಕ್ಷಣ ವ್ಯವಸ್ಥೆಯನ್ನು ಕುರಿತಾಗಿ ವಿವರಿಸುವ ಚರ್ಚೆಯ ಭಾಗವಾಗಿವೆ. ಭಾರತದ ಸಂದರ್ಭದಲ್ಲಿ ಹೇಳುವುದಾದರೆ, ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯ ಪಡೆಯುವ ಕಾಲದಲ್ಲಿ ಸರ್ಕಾರವು ಶಿಕ್ಷಣ ಮತ್ತದರ ಉದ್ದೇಶವನ್ನು ವ್ಯಾಖ್ಯಾನಿಸಿದ ರೀತಿ ಹಾಗೂ ಅದು ಹೆಚ್ಚು ಜನರನ್ನು ತಲುಪುವಂತೆ ಮಾಡುವುದಕ್ಕಾಗಿ ಅದು ಸ್ಥಾಪಿಸಲು ಬಯಸಿದ್ದ ವ್ಯವಸ್ಥೆಗಳು, ಸ್ವಾತಂತ್ರ್ಯ ಹೋರಾಟದ ಭಾಗವಾಗಿದ್ದ ಜನರು ಒಪ್ಪಬಹುದಾದ ವಿಚಾರಧಾರೆಗಳನ್ನು ಹೊಂದಿರಲೇ ಇಲ್ಲ. ಸ್ವಾತಂತ್ರ್ಯ ಬಂದು 65 ವರ್ಷಗಳಾದ ಮೇಲೂ ಇಂದಿನ ವ್ಯವಸ್ಥೆಯು ಹೆಚ್ಚಿನಂಶ ಅದೇ ಸಿದ್ಧಾಂತಗಳನ್ನು, ಅದೇ ಧೋರಣೆಗಳನ್ನು ಬಿಂಬಿಸುತ್ತಿರುವ ಸಂಗತಿಯು ನಮ್ಮ ಮುಂದೆ ಮುಜುಗರ ತರುವ ಪ್ರಶ್ನೆಗಳನ್ನಿರಿಸುತ್ತದೆ.

## ಬುನಾದಿ ಶಿಕ್ಷಣದ ತತ್ತ್ವಗಳು ಮತ್ತು ಸಮಕಾಲೀನ ಸಂದರ್ಭ

ಚರ್ಚೆಯ ಕೆಲವು ಅಂಶಗಳನ್ನು ನಾವು ಗಮನಿಸಿದಾಗ ಬುನಾದಿ ಶಿಕ್ಷಣದ ಮೂಲಭೂತ ತತ್ತ್ವಗಳು ಇಂದಿನ ಶಿಕ್ಷಣ ಪದ್ಧತಿಗೆ ಸವಾಲೆಸೆಯುತ್ತವೆ ಎನ್ನುವುದನ್ನು ನಾವು ಗುರುತಿಸಬಹುದು. ಈ ವಿಷಯವನ್ನು ಆಳವಾಗಿ ಪರಿಶೀಲಿಸಬೇಕಿದೆ ಹಾಗೂ ಇಂದಿನ ಸಂದರ್ಭಕ್ಕೆ ಹೊಂದುವಂತೆ ಪುನಃ ಸ್ಪಷ್ಟವಾಗಿ ನಿರೂಪಿಸಬೇಕಿದೆ. ಈ ಸವಾಲು ಮತ್ತು ಅದು ಸೂಚಿಸುತ್ತಿರುವ ಅರ್ಥಗಳು ಆ ಕಾಲದಲ್ಲಿ ನಿರೂಪಿತಗೊಂಡಿದ್ದ ಅರ್ಥಕ್ಕಿಂತಲೂ ಮೂಲಭೂತವಾಗಿ ಭಿನ್ನವಾದ ನಿರ್ದಿಷ್ಟ ಅಂಶಗಳನ್ನು ಸೂಚಿಸಬಹುದು. ಬುನಾದಿ ಶಿಕ್ಷಣದ ಉದ್ದೇಶ, ಪರಿಣಾಮ ಮತ್ತು ಪ್ರಸ್ತುತತೆಯನ್ನು ಕುರಿತಾದ ಗೊಂದಲವು ಬುನಾದಿ ಶಿಕ್ಷಣವನ್ನು ಕಾರ್ಯಗತಗೊಳಿಸಿದ ರೀತಿಯಿಂದಾಗಿ ಮತ್ತು ಅದರ ಶಕ್ತ ಸ್ವರೂಪವನ್ನು ತಗ್ಗಿಸುವ ವ್ಯಾಖ್ಯಾನವೊಂದಕ್ಕೆ ಅನುವು ಮಾಡಿಕೊಟ್ಟದ್ದರಿಂದಾಗಿ ಕೂಡ ಹುಟ್ಟಿತು. ಬುನಾದಿ ಶಿಕ್ಷಣವನ್ನು ಕುರಿತ ದುರ್ಬಲ ವಿವರಣೆಗಳು ಕೆಲವೊಂದು ಪ್ರಮುಖ ಸಾಮಾಜಿಕ–ರಾಜಕೀಯ ಮತ್ತು ಆರ್ಥಿಕ ಪರಿಣಾಮಗಳನ್ನು ಪರಿಗಣಿಸುವುದಿಲ್ಲ ಮತ್ತು ಶಿಕ್ಷಣದ ಉದ್ದೇಶವನ್ನು ಕುರಿತಾಗಿಯೇ ಇರುವ ಭಿನ್ನತೆಯ ಮೇಲೆ ಗಮನವನ್ನು ಕೇಂದ್ರೀಕರಿಸುವುದಿಲ್ಲ.

ಬುನಾದಿ ಶಿಕ್ಷಣದ ಚರ್ಚೆಯನ್ನು ಕುರಿತು ತಮ್ಮ ಅನುಕೂಲಕ್ಕೆ ತಕ್ಕಂತೆ ಮಾಡಿಕೊಂಡ ಹಲವಾರು ವ್ಯಾಖ್ಯಾನಗಳು, ಉದ್ದೇಶ ಪೂರ್ವಕವಾಗಿಯೇ ಒಪ್ಪಿಕೊಂಡಿದುದರ ಅಥವಾ ತಪ್ಪು ಗ್ರಹಿಕೆಯ ಫಲವೂ ಆಗಿರಬಹುದು. ಹಾಗೆಯೇ ಬಹುತೇಕವಾಗಿ ಚರ್ಚೆಯ ಸಂದರ್ಭವನ್ನು ಇಂದಿಗೆ ಬದಲಾಯಿಸಿಕೊಳ್ಳಲು ಅಸಾಮರ್ಥ್ಯದ ಫಲವಾಗಿ ಸಹ ಇರಬಹುದು. ಈ ಲೇಖನವೂ ಅದೇ ಪರಿಕಲ್ಪನೆಯ ಮತ್ತೊಂದು ವ್ಯಾಖ್ಯಾನವೆಂಬುದನ್ನು ಒಪ್ಪಿಕೊಳ್ಳಲೇಬೇಕು. ಸಮರ್ಥಿಸುವವರು ಮತ್ತು ವಿರೋಧಿಸುವವರಿಬ್ಬರಿಗೂ ಅವರ ಪ್ರಕಾರದಂತೆ ಬುನಾದಿ ಶಿಕ್ಷಣ ಮತ್ತು ಈ ವಿಶ್ಲೇಷಣೆಯ ಪ್ರಾಮುಖ್ಯತೆ, ಪ್ರಸ್ತುತತೆ ಮತ್ತು ಉದ್ದೇಶಗಳನ್ನು ಮಹತ್ತರವಾಗಿ ಬದಲಾಯಿಸಬಲ್ಲ ಕೆಲವು ಅಂಶಗಳನ್ನು ಈ ಲೇಖನದಲ್ಲಿ ಬಿಟ್ಟುಬಿಡಲಾಗಿದೆ ಎಂದುಕೊಳ್ಳಬಹುದು.

ಈ ಆತಂಕಕ್ಕೆ ಸಂಬಂಧಿಸಿದಂತೆ ವಿವರವಾದ ನಿರೂಪಣೆ ಕೊಡಬೇಕಾದರೆ ಇನ್ನೂ ಹೆಚ್ಚಿನ ಚರ್ಚೆಮಾಡಬೇಕಾಗುತ್ತದೆ. ಆದರೆ ಈ ವಿಶ್ಲೇಷಣೆಯ ಮೂಲಭೂತ ಚಿತ್ರಣವನ್ನು ಕೊಡುವುದಷ್ಟೇ ಇಲ್ಲಿನ ಉದ್ದೇಶ. ಹಾಗಾಗಿ ನಾವು ಈ ಕೆಲವು ಅಂಶಗಳನ್ನಷ್ಟೇ ಗಮನಿಸಲಿದ್ದೇವೆ ಮತ್ತು ಆಲೋಚಿಸಲು ಉಪಯುಕ್ತವಾದ ಕೆಲವು ದಿಶೆಗಳನ್ನು ಮಾತ್ರ ಹಂಚಿಕೊಳ್ಳುತ್ತೇವೆ. ತಾರ್ಕಿಕ ಚೌಕಟ್ಟನ್ನು ಕೇವಲ ಸೂಚಿಸಲಾಗುತ್ತದೆ. ಆಲೋಚಿಸಬೇಕಾದ ಅಂಶಗಳಲ್ಲಿ ಒಂದನ್ನು ಉದಾಹರಿಸಬೇಕೆಂದರೆ, ಇದರಲ್ಲಿ ಅಂತರ್ಗತವಾಗಿರುವ ಸಮುದಾಯದ ಸ್ವಯಂ ಆಡಳಿತ ಮತ್ತು ಸ್ವಯಂ ಆಳ್ವಿಕೆಯ ಸಿದ್ಧಾಂತ. ಒಂದು ಸಮುದಾಯವು ತನ್ನ ಹಾದಿಯನ್ನು ತಾನೇ ನಿರ್ಮಿಸಿಕೊಳ್ಳಲು ಅಗತ್ಯವಾದ ಚಿಂತನೆ ಮತ್ತು ದೂರದೃಷ್ಟಿಗಳನ್ನು ರೂಪಿಸಿಕೊಳ್ಳುವುದಕ್ಕೂ ಮತ್ತು ಆ ನಿಟ್ಟಿನಲ್ಲಿ ತನ್ನ ಮಕ್ಕಳ ಶಿಕ್ಷಣವನ್ನು ನಿರ್ದೇಶಿಸುವುದಕ್ಕೂ ಭಾರತದ ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಅದನ್ನು ಮಾಡುವುದಕ್ಕೂ ವ್ಯತ್ಯಾಸವಿದೆ. ಮಕ್ಕಳು ಸಮುದಾಯಕ್ಕೆ ಉಪಯುಕ್ತರಾಗುವಂತೆ, ಸಮುದಾಯದೊಳಗೆ ಬೆರೆಯುವಂತೆ, ಸಮುದಾಯಕ್ಕೆ ಹೊಂದಿಕೊಳ್ಳುವಂತೆ ಮಾಡುವ ಮತ್ತು ಕಲಿತ

ಹೊಸ ಚಿಂತನೆಗಳಿಗೆ ಸಮುದಾಯವು ಹೊಂದಿಕೊಳ್ಳುವಂತೆ ಮಾಡುವ ಒಂದು ಸಾಹಸ ಕಾರ್ಯವಾಗಿ ಶಿಕ್ಷಣದ ಉದ್ದೇಶವನ್ನು ನಾವು ಪರಿಶೀಲಿಸಬೇಕಾಗಿದೆ. ಮೂಲದಲ್ಲಿ, ಸಮುದಾಯದ ಒಳಗೇ ಇದ್ದು ಸಮುದಾಯವನ್ನು ಬದಲಾಯಿಸುವಂತಹ ಕಾರಕಶಕ್ತಿಗಳನ್ನು ಬೆಳೆಸುವುದನ್ನು ಇದು ಸೂಚಿಸುತ್ತದೆ. ಅಷ್ಟೇ ಅಲ್ಲ ಸಮುದಾಯದ ಕಲ್ಪನೆಯ ವ್ಯಾಪ್ತಿಯನ್ನು ದೇಶದ ಪರಿಕಲ್ಪನೆಗೆ (ರಾಷ್ಟ್ರೀಯತೆಯ ಭಾವ) ನಂತರ ಜಾಗತಿಕ ಪರಿಕಲ್ಪನೆಗಳಿಗೆ (ವಿಶ್ವ ಪ್ರಜೆ) ವಿಸ್ತರಿಸುವುದು, ನಿಕಟ ಸಮುದಾಯ ಮತ್ತು ಪ್ರತ್ಯಕ್ಷ ಮಾನವ ಸಂಬಂಧಗಳ ಪ್ರಾಮುಖ್ಯತೆಗಿಂತ (ಕೇಂದ್ರೀಯತೆಗಿಂತ) ತುಂಬಾ ಭಿನ್ನವಾದ ವಿವರಣೆಯನ್ನು ಹೊಂದುತ್ತದೆ. ಆಧುನಿಕ ಶಿಕ್ಷಣವು ಕೇವಲ ಅಕ್ಷರ ಜ್ಞಾನ ಮತ್ತು ಸಂಖ್ಯಾಜ್ಞಾನವನ್ನು ಮಾತ್ರ ಹೊಂದಲು ಸಹಾಯ ಮಾಡುತ್ತದೆ, ಹಾಗಾಗಿ, ಪರಾನುಭೂತಿಯನ್ನು ಹಾಳುಗೆಡುವುದರ ಜೊತೆಗೆ, ಶೋಷಣೆಯನ್ನು ಪ್ರೋತ್ಸಾಹಿಸುತ್ತದೆ ಎನ್ನುವ, ಬುನಾದಿ ಶಿಕ್ಷಣವನ್ನು ಪ್ರತಿಪಾದಿಸುವ ಕೆಲವರ ದೂರು ಕಟುಸತ್ಯ. ಆಧುನಿಕ ಶಿಕ್ಷಣವು ಹೀಗೆ ಮಾಡುತ್ತಿರುವುದನ್ನು ನಾವು ನೋಡಿದ್ದೇವೆ. ಇದು ಜನರನ್ನು ತಮ್ಮದೇ ಸಮುದಾಯಗಳಿಂದ ದೂರವಿರಿಸಿದೆ, ಪರಾನುಭೂತಿಯನ್ನು ಹಾಗೂ ಸಮುದಾಯದ ಜನರ ಜೀವನವನ್ನು ಬದಲಾಯಿಸುವ ಅವರ ಸಾಮರ್ಥ್ಯಗಳನ್ನು ಗಮನಾರ್ಹವಾಗಿ ಹೆಚ್ಚಿಸದೇ ಅವರಲ್ಲಿ ಗೊಂದಲವನ್ನುಂಟುಮಾಡಿದೆ. ದೊಡ್ಡ ಗುಂಪುಗಳನ್ನು ರೂಪಿಸುವ ಸಣ್ಣ ಸಮುದಾಯಗಳನ್ನು ಇಲ್ಲವಾಗಿಸಿದೆ. ಇದು ಒಳ್ಳೆಯದು ಅಥವಾ ಕೆಟ್ಟದ್ದು ಎಂದು ನಾವು ವಾದಿಸುತ್ತಿಲ್ಲ, ಕೇವಲ ಬದಲಾವಣೆಯನ್ನು ಎತ್ತಿ ತೋರುತ್ತಿದ್ದೇವಷ್ಟೇ. ಆದರೂ ಆಧುನಿಕ ಶಿಕ್ಷಣದ ಉದ್ದೇಶವು ಅದಾಗಿರಲಿಲ್ಲ ಅಥವಾ ಅದಕ್ಕೆ ವಿರುದ್ಧವಾಗಿತ್ತು ಎಂದೂ ವಾದಿಸಬಹುದು. ಅರ್ಥವ್ಯವಸ್ಥೆಯು ಬದಲಾದ ರೀತಿ ಮತ್ತು ಅದರಿಂದಾಗಿ ಸಮಾಜದಲ್ಲಾದ ಬದಲಾವಣೆಯೇ ಇದಕ್ಕೆ ಕಾರಣವೆನ್ನಬಹುದು.

## ಶಿಕ್ಷಣದ ನಿಯಂತ್ರಣ ಮತ್ತು ಅದಕ್ಕೆ ನಿರ್ದೇಶನವನ್ನು ನೀಡುವುದು

ಬುನಾದಿ ಶಿಕ್ಷಣದ ಸಂವಾದದಿಂದ ಒಡಮೂಡುವ ಮತ್ತು ಸಂವಾದವನ್ನು ರೂಪಿಸುವ ತತ್ತ್ವಗಳನ್ನು ಸರಿಯಾದ ದೃಷ್ಟಿಕೋನದಲ್ಲಿ ಹಾಗೂ ಸಮಕಾಲೀನ ಸಂದರ್ಭದ ದೃಷ್ಟಿಕೋನದಲ್ಲಿ ನೋಡಲು, ಇಂದಿನ ಶಿಕ್ಷಣ ವ್ಯವಸ್ಥೆಯ ಕೆಲವು ಮುಖ್ಯ ಅಂಶಗಳನ್ನು ನಾವು ನೋಡೋಣ. ಇಂದಿನ ಶಿಕ್ಷಣ ವ್ಯವಸ್ಥೆಯು ಸರ್ಕಾರದ ಹಣದಿಂದ ನಡೆಯುತ್ತದೆ ಮತ್ತು ಅದರ ಆಡಳಿತದ ಅಡಿಯಲ್ಲಿದೆ. ಈಗ ಹಲವಾರು ಖಾಸಗೀ ಶಾಲೆಗಳಿದ್ದರೂ ಮತ್ತು ಅವುಗಳ ಸಂಖ್ಯೆ ಬೆಳೆಯುತ್ತಿದ್ದರೂ ಕೂಡ ಅವುಗಳ ಸಂಖ್ಯೆ ಸರ್ಕಾರೀ ಶಾಲೆಗಳ ಸಂಖ್ಯೆಗಿಂತ ಬಹಳ ಕಡಿಮೆ ಇದೆ. ಅಲ್ಲದೇ, ಸಮುದಾಯದ ಆಡಳಿತಕ್ಕೊಳಪಟ್ಟ ಶಾಲೆಗಳು ಒಂದು ಕಡೆಯಿಂದ ಸರ್ಕಾರದ ಸ್ವಾಧೀನಕ್ಕೊಳಪಡುತ್ತಾ ಮತ್ತೊಂದು ಕಡೆಯಿಂದ ಒಬ್ಬರು ಅಥವಾ ಕೆಲವರು ಸೇರಿ ನಡೆಸುವ ಖಾಸಗೀ ಶಾಲೆಗಳ ಮಧ್ಯೆ ನಲುಗುತ್ತಾ ಸಂಖ್ಯೆಯಲ್ಲಿ ಕುಂಠಿತವಾಗುತ್ತಿವೆ. ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸುವ ಅಗತ್ಯದ ಬಗ್ಗೆ ಬಹಳಷ್ಟು ಕ್ರೋಡೀಕರಣ ಕಾರ್ಯಗಳಾಗುತ್ತಿವೆ. ಕನಿಷ್ಠಪಕ್ಷ ಶಾಲಾ ಶಿಕ್ಷಣವನ್ನು ಪಡೆಯಲೇಬೇಕಾದ ವಯೋಮಾನದವರೆಗೆ ಎಲ್ಲ ಮಕ್ಕಳು ಸಾಮಾನ್ಯ ಶಾಲೆಗಳಲ್ಲಿಯೇ ಶಿಕ್ಷಣವನ್ನು ಪಡೆಯುವ ಅಗತ್ಯತೆಯ ಬಗ್ಗೆ ಧ್ವನಿಗಳೇಳುತ್ತಿವೆ. ಎಲ್ಲ ಕಲಿಯುವವರಿಗೆ, ಒಂದು ಸಮರ್ಥನೀಯ ಬದ್ಧತೆಯಡಿಯಲ್ಲಿ ಕಡ್ಡಾಯ ಸಾರ್ವತ್ರಿಕ ಶಿಕ್ಷಣವು 10ನೆಯ ತರಗತಿಯವರೆಗೂ ದೊರೆಯಬೇಕೆಂಬುದನ್ನು ಇತ್ತೀಚೆಗೆ ಗಂಭೀರವಾಗಿ ಪರಿಗಣಿಸಲಾಗುತ್ತಿದೆ. ಆರ್‌ಟಿಇಯು (RTE) ಈಗಾಗಲೇ ಎಲ್ಲ ಮಕ್ಕಳೂ ಶಾಲೆಗೆ ಸೇರಲೇಬೇಕು ಮತ್ತು ಕನಿಷ್ಠ 8ನೇ ತರಗತಿಯವರೆಗೂ ಅಲ್ಲಿರಬೇಕೆಂಬುದನ್ನು ಕಡ್ಡಾಯಗೊಳಿಸಿದೆ. ಅಂದರೆ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಕಾಯಿದೆಯ ಪ್ರಕಾರ, ಪ್ರತಿ ಮಗುವೂ ಶಾಲೆಯಲ್ಲಿ ಉಳಿಯಬೇಕು ಮತ್ತು ಒಂದು ರೀತಿಯಲ್ಲಿ ಸರ್ಕಾರದ ಶಿಕ್ಷಣ ಇಲಾಖೆಯ ಆಡಳಿತವರ್ಗವು ನಿರ್ಧರಿಸಿದ ಉದ್ದೇಶ ಮತ್ತು ರೀತಿಗಳಿಗೆ ಅನುಗುಣವಾದ ವಿಧಾನಗಳಲ್ಲಿ ಶಿಕ್ಷಣ ಪಡೆಯಬೇಕು ಎಂದು ಅಗತ್ಯಪಡಿಸುತ್ತದೆ. ಶಿಕ್ಷಣದ ಉದ್ದೇಶದ ಬಗೆಗಿನ ಚರ್ಚೆಗಳಲ್ಲಿಯೂ ಕೂಡ ಶೈಕ್ಷಣಿಕ ಪ್ರಕ್ರಿಯೆಗಳು ಯಾರ ನಿಯಂತ್ರಣದಲ್ಲಿವೆ ಮತ್ತು ಯಾರು ಅದಕ್ಕೆ ಹಣವನ್ನು ಕೊಡುತ್ತಾರೆ ಎಂಬುದರ ನೆರಳು ಮುಸುಕಿರುವುದನ್ನು ಸ್ಪಷ್ಟವಾಗಿ ಕಾಣಬಹುದು.

ಪಠ್ಯಕ್ರಮ ಮತ್ತು ಪಠ್ಯ ಪುಸ್ತಕಗಳು ರಾಜ್ಯ ಅಥವಾ ಕೇಂದ್ರ ಸರ್ಕಾರಗಳ ವಿಚಾರಕ್ಕೆ ಅನುಗುಣವಾದ ಸಂಸ್ಥೆಗಳಿಂದಲೇ ರಚನೆಯಾಗುತ್ತವೆ. ಇವು ರಾಷ್ಟ್ರೀಯ ಪಠ್ಯಕ್ರಮದ ದಸ್ತಾವೇಜುಗಳಲ್ಲಿನ ವಿವರಣೆಗಳು, ಗ್ರಹಿಕೆ ಹಾಗೂ ಆಶಯಗಳಿಗೆ ಅನುಗುಣವಾಗಿರುತ್ತವೆ ಎಂಬ ಅಭಿಪ್ರಾಯ ಇದೆ. ಶೈಕ್ಷಣಿಕ ವರ್ಷಗಳ ವಿಭಜನೆ, ಯಾವ ವಿಷಯಗಳ ಬಗ್ಗೆ ಒತ್ತು ನೀಡಬೇಕು, ಅದಕ್ಕೆ ಎಷ್ಟು ಪ್ರಾಮುಖ್ಯತೆ ನೀಡಬೇಕು ಇತ್ಯಾದಿ ಎಲ್ಲ ವಿವರಗಳನ್ನೂ ಸರ್ಕಾರವು ನಿಯಂತ್ರಿಸುತ್ತದೆ. ಇತ್ತೀಚೆಗೆ ದೆಹಲಿ ವಿಶ್ವವಿದ್ಯಾಲಯ ಮತ್ತು ಕೆಲವು ಖಾಸಗೀ ವಿಶ್ವವಿದ್ಯಾಲಯಗಳು ತಮ್ಮ ನಾಲ್ಕು ವರ್ಷದ ಪದವಿ ಕಾರ್ಯಕ್ರಮಗಳನ್ನು, ಅವು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸೂಚಿತವಾದ 10+2+3 ಮಾದರಿಗೆ ಅನುಗುಣವಾಗಿ ಇಲ್ಲವೆಂಬ ಕಾರಣದಿಂದ ಹಿಂಪಡೆಯಬೇಕಾಗಿ ಬಂದುದು ಇದಕ್ಕೆ ಉತ್ತಮ ನಿದರ್ಶನ. ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಮಂಡಳಿಗಳು ಹೇಗೆ ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು ಎಂದು ಆಜ್ಞೆ ಮಾಡುವ ಶಿಕ್ಷಣ ನೀತಿಯ ಅಧ್ಯಾರೋಹಿ ಅಧಿಕಾರ ಮತ್ತು ರಾಜ್ಯ ಸರ್ಕಾರಗಳು ಹಾಗು ಶಿಕ್ಷಣ ಮಂಡಳಿಗಳು ತಮ್ಮ ಶೈಕ್ಷಣಿಕ ಕಾರ್ಯಕ್ರಮಗಳು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿಗೆ

ಅನುಗುಣವಾಗಿವೆ ಎಂಬುದನ್ನು ನಿರೂಪಿಸಲು ಸತತವಾಗಿ ನಡೆಸುವ ಪ್ರಯತ್ನಗಳೂ ಕೂಡ ಇದನ್ನು ವಿಶದಪಡಿಸುತ್ತವೆ. ಸರ್ಕಾರಿ ಅಧಿಕಾರಿಗಳ ಧೋರಣೆ ಮತ್ತು ವ್ಯಾಖ್ಯಾನಗಳನ್ನು ಅನುಸರಿಸುವ ಇಚ್ಛೆ ಮತ್ತು ಅಗತ್ಯಗಳಿಗೆ ಕಾರಣ ಈ ಕೆಲವು ಯೋಜನೆಗಳಿಗೆ ಸರ್ಕಾರ ಹಣಕೊಡುತ್ತಿದೆ ಎಂಬುದು ಮಾತ್ರವಲ್ಲ, ಅವು ಒದಗಿಸುವ ತೋರಿಕೆಯ ನ್ಯಾಯಸಮ್ಮತತೆಯನ್ನು ಉಪಯೋಗಿಸಿಕೊಳ್ಳಲೂ ಕೂಡ ಹಾಗೆ ಮಾಡಲಾಗುತ್ತಿದೆ.

ಹೀಗಿದ್ದರೂ ಶಿಕ್ಷಣಕ್ಕಾಗಿ ಪ್ರಮುಖ ಹಣ ಹೂಡಿಕೆ ಮತು ವೆಚ್ಚ ವನ್ನು ಈಗಲೂ ಸರ್ಕಾರವೇ ಮಾಡುತ್ತಿದೆ. ಇದು ಜನರ ಹಣವೇ, ಆದರೆ ತೆರಿಗೆ, ಉಪಕರ, ಮತ್ತು ಇತರ ಹೆಚ್ಚುವರಿ ಕರಗಳ ಮೂಲಕ ಬರುತ್ತದೆ. ಯಾವುದರ ಮೇಲೆ ತೆರಿಗೆ ವಿಧಿಸಿ ಅದು ಶಿಕ್ಷಣಕ್ಕೆ ವಿನಿಯೋಗವಾಗಬೇಕು ಎನ್ನುವಂತಹ ಯಾವುದೇ ಒಂದು ನಿರ್ದಿಷ್ಟ ಉತ್ಪನ್ನ ಅಥವಾ ಚಟುವಟಿಕೆಯಿರುವುದಿಲ್ಲ. ಹಣವನ್ನು ಎಲ್ಲಿ, ಹೇಗೆ ವಿನಿಯೋಗಿಸಬೇಕು ಎಂಬುದನ್ನು ಕೂಡ ಸರ್ಕಾರವೇ ನಿರ್ಧರಿಸುತ್ತದೆ. ಶಿಕ್ಷಕರ ಸಂಭಾವನೆ ಮತ್ತು ವೇತನ ಗಳು ಕೂಡ ಸಮುದಾಯಕ್ಕೆ ಸಂಬಂಧಿಸಿದ್ದಲ್ಲ ಹಾಗಾಗಿ ಈ ಕುರಿತು ಸಮುದಾಯವು ಏನೂ ಹೇಳುವಂತಿಲ್ಲ. ಶಿಕ್ಷಕರ ಸ್ವರೂಪ, ಅವರು ಉಪಯೋಗಿಸುವ ಸಾಮಗ್ರಿಗಳು ಮತ್ತು ವಿಧಾನಗಳು, ಮಕ್ಕಳ ಮೌಲ್ಯಮಾಪನವನ್ನು ಹೇಗೆ ಮಾಡಬೇಕು ಎಂಬುದನ್ನೆಲ್ಲ ಸರ್ಕಾರದ ಶಿಕ್ಷಣ ಸಂಬಂಧಿ ವ್ಯವಸ್ಥೆಗಳೇ ನಿರ್ಧರಿಸುತ್ತವೆ.

## ಸಮುದಾಯದ ಸಹಭಾಗಿತ್ವ ಮತ್ತು ಅದರ ಜಾರಿಸಾಧ್ಯತೆ

ಶಿಕ್ಷಕರ ನೇಮಕಾತಿ ಮತ್ತು ಆಡಳಿತ ನಿರ್ವಹಣೆಯೂ ಸೇರಿದಂತೆ ಶಾಲಾ ಆಡಳಿತ ಪ್ರಕ್ರಿಯೆಯಲ್ಲಿ, ಸಮುದಾಯವನ್ನು ವಿವಿಧ ರೀತಿಯಲ್ಲಿ ತೊಡಗಿಸಿಕೊಳ್ಳುವ ಪ್ರಯತ್ನಗಳು ನಡೆಯುತ್ತಲೇ ಇವೆ ಹಾಗೂ ಇತ್ತೀಚಿನ, ಪೋಷಕರನ್ನು ಸದಸ್ಯರನ್ನಾಗಿ ಒಳಗೊಂಡ ಶಾಲಾ ಆಡಳಿತ ನಿರ್ವಹಣಾ ಸಮಿತಿಗಳ ವಿಚಾರವು ಸಮನ್ವಯ ಮನೋವೃತ್ತಿಯಿಂದ ಬಂದಂತೆ ಕಾಣುತ್ತದೆ. ಈ ಪ್ರಯತ್ನದ ಫಲಿತಾಂಶ ಮಾತ್ರ ನಿರುತ್ಸಾಹದಾಯಕವಾಗಿದೆ. ಶಿಕ್ಷಣದ ಪ್ರಕ್ರಿಯೆ ಹೇಗಿರಬೇಕು ಎಂದು ನಿರ್ಧರಿಸುವುದು ಮತ್ತು ಶಿಕ್ಷಣದ ಪ್ರಕ್ರಿಯೆಗೆ ಕೊಡುಗೆ ನೀಡುವುದರಲ್ಲಿ ಸಮುದಾಯದ ಸೀಮಿತ ಭಾಗವಹಿಸುವಿಕೆಯು ನಿಜಕ್ಕೂ ಚಿಂತೆಯ ವಿಷಯ. ಬಹಳವೆಂದರೆ, ಇದರ ಪ್ರಸಕ್ತ ಪಾತ್ರವು ಪೂರಕ ಸಹಾಯಕರದ್ದು ಎಂದಷ್ಟೇ ಹೇಳಬಹುದು. ಕೇವಲ ಶಾಲೆಯ ಕಟ್ಟಡ ಕಟ್ಟುವಲ್ಲಿ ಅಥವಾ ಕಟ್ಟಲು ಹಣದ ಸಹಾಯ ಮಾಡುವಲ್ಲಿ, ಶಿಕ್ಷಕರು ಶಾಲೆಯಲ್ಲಿ ಹಾಜರಿರುವಂತೆ ನಿಗಾವಣೆಯಲ್ಲಿ, ಇಲ್ಲವೇ ಮಕ್ಕಳನ್ನು ಶಾಲೆಗೆ ನಿಯತವಾಗಿ ಬರುವಂತೆ ಮಾಡುವಲ್ಲಿ ಇವರ ಪಾತ್ರವಿರುತ್ತದೆ ಅಷ್ಟೇ. ಇವರಿಗೆ ಮತ್ತಾವುದೇ ಪಾತ್ರವಿಲ್ಲ ಅಥವಾ ಇವರಿಂದ ಬೇರಾವುದೇ ಕೊಡುಗೆಯಿಲ್ಲ. ಕೆಲಸ ಗಳಿಸುವುದು ಅಂದರೆ ಶ್ರಮಿಕೇತರ ಕೆಲಸ ಅಥವಾ ಸರ್ಕಾರೀ ಕೆಲಸ ಗಳಿಸುವುದು ಶಾಲಾ ಶಿಕ್ಷಣದ ಆಶೋತ್ತರಗಳಾಗಿವೆ. ತಮ್ಮದೇ ಸುತ್ತಮುತ್ತಲಿನ ಆರ್ಥವ್ಯವಸ್ಥೆಯ ಭಾಗವಾಗುವಂತೆ ಮಕ್ಕಳನ್ನು ಸಿದ್ಧಗೊಳಿಸುವ ಕಲಿಕೆಗೆ ಶಾಲೆಯಲ್ಲಿ ಅತಿ ಕಡಿಮೆ ಅವಕಾಶವಿದೆ. ಎಲ್ಲರಿಗೂ ಕೆಲಸದ ಅವಕಾಶಗಳು ಸಿಗುವಂತೆ ನಾವು ಪ್ರಯತ್ನಿಸಬೇಕಾದದ್ದು, ನೋಡಿಕೊಳ್ಳಬೇಕಾದದ್ದು ಅಗತ್ಯವಾದರೂ, ಶಾಲಾಶಿಕ್ಷಣವು ಸ್ಥಳೀಯ ಸಮುದಾಯವನ್ನು ಕಡೆಗಣಿಸುವುದರ ಮೂಲಕ ನೆರೆಹೊರೆಯ ಆರ್ಥಿಕ ಉದ್ಯಮಗಳ ಬಹುದೊಡ್ಡ ಭಾಗವನ್ನು ನಿರಂತರವಾಗಿ ಕೀಳಾಗಿ ಕಾಣುತ್ತದೆ. ಜೊತೆಗೆ ತಮ್ಮ ಆಭೀಪ್ಸೆಯ ಗುರಿಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೇ ಇರುವುದರಿಂದ ಸಮುದಾಯವು ಶಾಲೆಯೊಡನೆ ಅಥವಾ ತಮ್ಮದೇ ಮಕ್ಕಳೊಡನೆ ಪರಿಣಾಮಕಾರೀ ಸಂವಾದವನ್ನು ನಡೆಸಲು ಅಸಮರ್ಥವಾಗಿದೆ. ಇತ್ತೀಚಿನ ದಾಖಲೆಗಳು ಈ ಆತಂಕದ ಬಗ್ಗೆ ಧ್ವನಿ ಎತ್ತುವ ಪ್ರಯತ್ನ ನಡೆಸಿವೆ ಮತ್ತು ಇನ್ನೂ ಹೆಚ್ಚಿನ ಪಾತ್ರದ ಅಗತ್ಯವನ್ನು ಒತ್ತಿ ಹೇಳಿವೆ. ಆದರೂ ಇದು ದಿಗಂತದಂಚಿನಲ್ಲಿಯೂ ಕಾಣ ಸಿಗುತ್ತಿಲ್ಲ. ಅದನ್ನು ಸಾಧ್ಯವಾಗಿಸುವ ಅಂಶಗಳು ಇಲ್ಲದಿರುವುದರಿಂದ ಮತ್ತು ಅದರ ಪರಿಣಾಮವಾಗಿ ಎಲ್ಲಾ ಕಡೆಗಳಲ್ಲೂ ದೃಢನಂಬಿಕೆಯ ಕೊರತೆಯಿಂದ, ಈಗಾಗಲೇ ಹೇಳಿರುವ ಪಾತ್ರಗಳ ಅವಕಾಶಕ್ಕಾಗಲೀ ಅಥವಾ ಅವನ್ನು ಜಾರಿಗೆ ತರುವುದಾಗಲೀ ಕಷ್ಟವಾಗಿದೆ.

## ಒಡಮೂಡುತ್ತಿರುವ ಪಠ್ಯಕ್ರಮದ ತತ್ತ್ವಗಳು

ಮೇಲಿನ ವಿಷಯಗಳ ಬೆಳಕಿನಲ್ಲಿ ನಾವು ಬುನಾದಿ ಶಿಕ್ಷಣವೆಂಬ ಆದರ್ಶ ಮಾದರಿಯಿಂದ ಪಡೆದ ಪ್ರಮುಖ ಪಠ್ಯಕ್ರಮ ತತ್ತ್ವಗಳನ್ನು ಮತ್ತೆ ಪರಿಶೀಲಿಸೋಣ. ಹಾಗೆ ಮಾಡುವಾಗ, ಪ್ರಸಕ್ತ ವ್ಯವಸ್ಥೆಯು ಬುನಾದಿ ಶಿಕ್ಷಣದ ಚಿಂತನೆಯನ್ನು ನಕಲು ಮಾಡಲು ಪ್ರಯತ್ನಿಸುತ್ತಿದೆ ಎಂಬುದನ್ನು ಮರೆಯದಿರೋಣ. ಆ ತತ್ತ್ವಗಳನ್ನು ಇಲ್ಲಿ ಬಿಂಬಿಸಿದ ರೀತಿಯಲ್ಲೇ ನೋಡದಿದ್ದರೂ ಅವು ಎಷ್ಟೋ ಜನರನ್ನು ತೊಡಗಿಸಿಕೊಂಡ ಆಂದೋಲನವೊಂದರ ಬೆನ್ನೆಲುಬಾಗಿವೆ ಮತ್ತು ಶೈಕ್ಷಣಿಕ ಹಾಗೂ ಅದಕ್ಕೆ ಸಂಬಂಧಿಸಿದ ಇನ್ನಿತರ ಗುರಿಗಳನ್ನು ಸಾಧಿಸುವ ದಿಸೆಯಲ್ಲಿ ಹಲವಾರು ಪ್ರಕ್ರಿಯೆಗಳನ್ನು ಆರಂಭಿಸುವಂತೆ ಅವರನ್ನು ಪ್ರೇರೇಪಿಸಿವೆ. ಈ ಆಲೋಚನೆಗಳು ಹೊರಹೊಮ್ಮಿದ ರೀತಿ ಏಕಪ್ರಕಾರವಾಗಿ ಇರಲಿಲ್ಲ ಮತ್ತು ಅವು ನಿರ್ದಿಷ್ಟವಾದ ಸಾಮಾನ್ಯ ಅಂಶಗಳನ್ನು ಬಿಂಬಿಸುವುದೂ ಇಲ್ಲ. ಆದಾಗ್ಯೂ, ಇವುಗಳನ್ನು ಪ್ರೇರೇಪಿಸಿದ ಒಂದು ಮೂಲ ಚೈತನ್ಯ ಅಲ್ಲಿತ್ತು. ಆ ಚೈತನ್ಯ ಹುಟ್ಟಿದ್ದು ಪುನರ್ನಿರ್ಮಾಣ ಮಾಡುವ ಒತ್ತಂಬದಿಂದ ಮತ್ತು ಹೇರಿಕೆಯೆಂದೆನಿಸಿದ್ದಕ್ಕೆ ವಿರೋಧ ಒಡ್ಡುವ ಆಶಯದಿಂದ. ಅದನ್ನು ಸಂಪೂರ್ಣವಾಗಿ ನಿರೂಪಿಸಲಾಗಿದೆ ಅಥವಾ ಬಿಂಬಿಸಲಾಗಿದೆ ಎಂದು ಹೇಳಲಾಗದಿದ್ದರೂ ಅದೇ ಬುನಾದಿ

ಶಿಕ್ಷಣದ ಪರಿಕಲ್ಪನೆಯ ತಳಹದಿ. ಆ ಕೆಲವು ತತ್ತ್ವಗಳನ್ನು ಗಮನಿಸೋಣ:

ಅ) ಸಮುದಾಯವನ್ನು, ಅದರ ಆಲೋಚನೆಗಳು, ಕಾಳಜಿಗಳು ಮತ್ತು ಅನುಭವಗಳನ್ನು ಒಳಗೊಳ್ಳುವುದನ್ನು ಆಧರಿಸಿದ ಪ್ರಕ್ರಿಯೆ. ಇದನ್ನು ಅರ್ಥೈಸುವ ರೀತಿ ಮತ್ತು ಸಮುದಾಯದ ಆಲೋಚನೆಗಳನ್ನು ಎಷ್ಟರ ಮಟ್ಟಿಗೆ ಅಂಗೀಕರಿಸಲಾಗುತ್ತಿದೆ ಅಥವಾ ಬದಲಾಗಿ ತರಲು ಪ್ರಯತ್ನಿಸಲಾಗುತ್ತದೆ ಎನ್ನುವುದೆಲ್ಲ ಚರ್ಚಾಸ್ಪದ ವಿಷಯ. ಶಿಕ್ಷಣವು ಏಕಕಾಲಕ್ಕೆ ಸಂಸ್ಕೃತಿ, ಸಂಪ್ರದಾಯ ಮತ್ತು ಪರಂಪರೆಯ ರಕ್ಷಕ ಹಾಗೂ ಹೊಸ ಚಿಂತನೆಗಳ, ಪ್ರಗತಿಯ ಹರಿಕಾರ ಕೂಡ ಆಗಿರುವುದರಿಂದ ಇವುಗಳ ಬಗ್ಗೆ ಒಂದೇ ಗಟ್ಟಿ ನಿಲುವನ್ನು ತಳೆಯುವುದು ಕಷ್ಟ. ಹಾಗಾಗಿ ಆ ಕಾಲದ ಹಲವಾರು ಭಾರತೀಯ ಶಿಕ್ಷಣ ಚಿಂತಕರು ವಿವಿಧ ದೃಷ್ಟಿಕೋನಗಳನ್ನು ಹೊಂದಿದ್ದರು. ಯಾರು ಹೆಚ್ಚು ವಿದ್ಯಾವಂತ? ಅನಕ್ಷರಸ್ಥನೇ ಮತ್ತು "ಕೇವಲ" ಪುಸ್ತಕಗಳನ್ನೋದಿದವನೇ ಎಂಬ ಬಗ್ಗೆ ಚರ್ಚೆ ಇನ್ನೂ ಸಂಪೂರ್ಣವಾಗಿ ಮುಗಿದಿಲ್ಲ.

ಆ) ಮಗುವನ್ನೇ ದೃಷ್ಟಿಯಲ್ಲಿಟ್ಟುಕೊಂಡು ರೂಪಿಸಲಾದ ಮತ್ತು ಅದರ ಅನುಭವವನ್ನು ಆಧರಿಸಿದ ಮತ್ತು ಅದರ ಅನುಭವವನ್ನು ಬಳಸಿಕೊಳ್ಳುವ ಒಂದು ಪ್ರಕ್ರಿಯೆ. ಇದು, ಸಂರಚನಾವಾದ ಅಥವಾ ಸಂರಚನಾವಾದಿ (ಇಲ್ಲಿ ನಾವು ಮನಗಾಣಿಸುತ್ತಿರುವ ಅಂಶದ ಸೀಮಿತ ಉದ್ದೇಶದಿಂದಾಗಿ, ಇವುಗಳ ಸಾಮಾನ್ಯ ಮತ್ತು ಭಿನ್ನ ಅಂಶಗಳನ್ನು ವಿಶ್ಲೇಷಿಸುವ ಪ್ರಯತ್ನವನ್ನು ನಾವು ಮಾಡುವುದಿಲ್ಲ) ಚಿಂತನೆಯಿಂದ ಮೂಡಿಬಂದ ಮತ್ತೊಂದು ಅಂಶ. ಇದು ನಾವು ಕಲಿಸುತ್ತಿರುವ ಜ್ಞಾನದ ವ್ಯಾಪ್ತಿ ಕುರಿತು ಗಮನ ಕೇಂದ್ರೀಕರಿಸುವುದರ ಜೊತೆಗೆ, ಜ್ಞಾನವೆಂದರೇನು ಮತ್ತು ಯಾವ ಜ್ಞಾನವು ಸಿಂಧುವಾದುದು ಎಂಬ ಪ್ರಶ್ನೆಯನ್ನು ಕೂಡ ಎತ್ತುತ್ತದೆ. ಶಿಕ್ಷಣವು ಅರಿಯುವ ಪ್ರಕ್ರಿಯೆ ಎಂಬ ಪರಿಗಣನೆಯನ್ನು ಪೂರ್ಣಒಪ್ಪಿಕೊಂಡಿರುವೆವಾದರೂ, ಮಗು ಮತ್ತು ಸಮುದಾಯದ ಅರಿವು ಕೇಂದ್ರ ವಸ್ತು ಆಗಬೇಕೆಂಬುದು, ಔಪಚಾರಿಕ ಶಾಲಾ ಪದ್ಧತಿಯೊಳಗಡೆ ಯಾವುದು ಪಠ್ಯ ವಿಷಯವಾಗಬೇಕು ಎಂಬ ಪ್ರಶ್ನೆಯನ್ನು ಎತ್ತುತ್ತದೆ.

ಕಲಿಕೆಯ ಪ್ರಕ್ರಿಯೆಯನ್ನು ಕೇಂದ್ರವಾಗುಳ್ಳ ವಿಶ್ಲೇಷಣೆಯಲ್ಲಿ, ಇದನ್ನು ಶಿಕ್ಷಣವು ಜ್ಞಾನದ ನೀಡಿಕೆ ವಿರುದ್ಧ ಶಿಕ್ಷಣವು ಜ್ಞಾನದ ಸೃಜನೆಯ ಪ್ರಕ್ರಿಯೆ ಎಂಬ ವಿವಾದದ ಒಂದು ಸ್ಥೂಲ ಚಿತ್ರವಾಗಿಸಬಹುದು. ಇದು ಸ್ವಲ್ಪ ಒರಟಾದರೂ, ಬಹಳಷ್ಟು ಬಾರಿ ಶೈಕ್ಷಣಿಕ ಕಾರ್ಯಕ್ರಮಗಳು ಜ್ಞಾನವನ್ನು ಮನದಟ್ಟು ಮಾಡಿಸುವ ಚೌಕಟ್ಟುಗಳನ್ನು ಮರೆತು ಮಕ್ಕಳು ತಮ್ಮ ಉತ್ತರಗಳನ್ನು ತಾವೇ ರೂಪಿಸಿಕೊಳ್ಳುವುದರ ಅಗತ್ಯಕ್ಕೆ ಒತ್ತು ನೀಡುತ್ತಿವೆ. ಜೊತೆಗೆ, ಅನೇಕ ವೇಳೆ ಇದನ್ನು ಬುನಾದಿ ಶಿಕ್ಷಣ ಹಾಗೂ ಸ್ಥಳೀಯ ಜ್ಞಾನ ಪದ್ಧತಿಯೆಡೆಗಿನ ಗೌರವಕ್ಕೆ ತಳುಕು ಹಾಕಲಾಗುತ್ತದೆ.

ಇ) ಮಗುವಿಗೆ ವಿದ್ಯಾಭ್ಯಾಸ ಮಾಡಿಸಲು ಅದರದ್ದೇ ಭಾಷೆಯ ಬಳಕೆ ಮತ್ತು ಅದರ ಭಾಷಾನುಭವದ ಹೆಚ್ಚಿನ ಬಳಕೆ. ಈ ನಿರ್ದಿಷ್ಟ ತತ್ತ್ವದ ಹಿಂದಿನ ಸಂದರ್ಭವು ತನ್ನ ಮೂಲದಲ್ಲಿ ಎರಡು ಪ್ರಮುಖ ಅಂಶಗಳನ್ನು ಹೊಂದಿದೆ. ಮೊದಲನೆಯದು, ಅಂದಿನ ಹಾಗೂ ಕೆಲವು ರೀತಿಯಲ್ಲಿ ಈಗಿನದೂ ಆದ ನಿರ್ದಿಷ್ಟ ಸಾಮಾಜಿಕ–ರಾಜಕೀಯ ಸಂದರ್ಭದಿಂದಾಗಿ ಹೊರಹೊಮ್ಮಿದ್ದು ಮತ್ತೊಂದು ಮನುಷ್ಯನ ಕಲಿಕೆಯ ವಿಧಾನದ ಬಗೆಗಿನ ಅರಿವಿನಿಂದಾದದ್ದು. ಆತ್ಮಗೌರವವನ್ನು ಹುಟ್ಟುಹಾಕುವುದಕ್ಕೆ ಹಾಗೂ ಸಂಸ್ಕೃತಿ, ಸಂಪ್ರದಾಯ ಮತ್ತು ಮಗುವು ಯಾವ ಸಮುದಾಯದಿಂದ ಬಂದಿರುತ್ತದೆಯೋ ಅದರ ಚಿಂತನಾಕ್ರಮಗಳನ್ನು ಗುರುತಿಸುವುದಕ್ಕೆ ಮತ್ತು ಅದರ ಬಗ್ಗೆ ಪ್ರೀತಿ ಅಕ್ಕರೆ ಉಂಟುಮಾಡುವುದಕ್ಕೆ ಸ್ಥಳೀಯ ಭಾಷೆಯ ಬಳಕೆ ಅತ್ಯಗತ್ಯ. ಮಗುವು ತನ್ನದೇ ಪರಿಕಲ್ಪನೆಗಳನ್ನು ರೂಪಿಸಿಕೊಂಡು ಪುಸ್ತಕದೊಳಗಿನ ಅಮೂರ್ತ ಔಪಚಾರಿಕ ಪರಿಕಲ್ಪನೆಗಳೊಂದಿಗೆ ಹೋಲಿಸಿ ನೋಡುವುದಕ್ಕೆ ಕೂಡ ಅದು ಸಾಮರ್ಥ್ಯ ನೀಡುತ್ತದೆ. ಸ್ಥಳೀಯ ಭಾಷೆಯ ಉಪಯೋಗದಿಂದ ಪರೋಕ್ಷವಾಗಿ ಆ ಭಾಷೆಯ ಬೆಳವಣಿಗೆ, ಅಭಿವೃದ್ಧಿ ಮತ್ತು ಹೊಸ ವಿಚಾರಗಳನ್ನು ಸೇರಿಸಿಕೊಳ್ಳುವುದರ ಮೂಲಕ ಪಡೆದುಕೊಂಡ ವಿಸ್ತರಣೆ ಆಗುವ ಕಾರಣದಿಂದಲೂ ಸ್ಥಳೀಯ ಭಾಷೆಯ ಉಪಯೋಗ ಮುಖ್ಯವಾಗುತ್ತದೆ. ಸ್ಥಳೀಯ ಭಾಷೆಯು, ಶಾಲೆಯ ಹೊಸ ಭಾಷೆಯ ಪರಿಚಯವಿರದ ಕಾರಣ, ಹೊಸ ಜ್ಞಾನವನ್ನು ಪಡೆಯಲಾಗದ ಹಲವರಿಗಷ್ಟೇ ಮಿತಿಯಾಗುವುದರ ಬದಲು, ಓದು ಮತ್ತು ಅನುಭವವನ್ನು ಪಡೆದ ಶಾಲೆಯ ಹೊಸ ಭಾಷೆಯ ಪರಿಚಯ ದೊರೆತ ಕಲಿಯುವವರು ಇಡೀ ಸಮುದಾಯದೊಡನೆ ಅದನ್ನು ಹಂಚಿಕೊಳ್ಳುವುದಕ್ಕೆ, ಜ್ಞಾನಪ್ರಸಾರಕ್ಕೆ ಇದೊಂದು ಮುಖ್ಯ ಸಾಧನವೂ ಆಗುತ್ತದೆ. ಹಾಗಾಗಿ ಶಾಲಾ ಬೋಧನೆಯಲ್ಲಿ ಮಾತೃ ಭಾಷೆಯ ಬಳಕೆಯು, ಅದು ಮಗುವಿಗೆ ತನ್ನ ಪರಿಕಲ್ಪನೆಗಳ ಸಂರಚನೆಯನ್ನು ಮಾಡಿಕೊಳ್ಳಲು ಅನುವಾಗುತ್ತದೆ ಎಂಬ ಸರಳ ಬೋಧನಾ ಉದ್ದೇಶವಷ್ಟೇ ಸಾಧಿಸದೆ, ಬದಲಿಗೆ, ಮಗುವಿನ ಮತ್ತು ಸಮುದಾಯದ ಭಾಷೆಗೆ ಒಂದು ತೂಕ ಮತ್ತು ಗೌರವವನ್ನು ಕೊಡುವ, ಹೊಸ ಹೊಸ ಚಿಂತನೆ, ಜ್ಞಾನಗಳನ್ನು ಆ ಭಾಷೆಯೊಳಕ್ಕೆ ತರುವ, ಸಮುದಾಯವು ತನ್ನ ಭವಿಷ್ಯವನ್ನು ತಾನೇ ನಿರ್ಮಿಸಿಕೊಳ್ಳುವ ಹಾಗೆ ಅದನ್ನು ಸಶಕ್ತವಾಗಿಸುವ ಆಳವಾದ ಉದ್ದೇಶವನ್ನು ಸಾಧಿಸುತ್ತದೆ.

ಈ) ಸಮುದಾಯದ ಎಲ್ಲ ಮಕ್ಕಳನ್ನೂ ಮತ್ತು ಎಲ್ಲ ಸದಸ್ಯರನ್ನೂ ತಲುಪುವುದು, ಅವರ ಕಾರ್ಯಗಳನ್ನು ಗೌರವಿಸುವುದು ಮತ್ತು ಅವುಗಳ ಅಂಶಗಳನ್ನು ಶಾಲೆಯಲ್ಲಿ ಸೇರಿಸಿಕೊಳ್ಳುವುದು. ಮಕ್ಕಳು ಏನನ್ನು ಕಲಿಯಬೇಕು ಎಂಬುದನ್ನು ನಿರ್ಧರಿಸುವುದರಲ್ಲಿ, ಅವರಿಗೆ ಕಲಿಯಲು ಸಹಾಯ ಮಾಡುವುದರಲ್ಲಿ ಮತ್ತು ಅವರ ಮೌಲ್ಯಮಾಪನದ ಜವಾಬ್ದಾರಿ ಹೊರುವುದರಲ್ಲಿ, ಸಮುದಾಯವು ಪಾಲ್ಗೊಳ್ಳುವಂತೆ ನೋಡಿಕೊಳ್ಳುವುದು. ಸ್ಥಳೀಯ ಸಮುದಾಯದವರು ಮಕ್ಕಳಿಗೆ ಸಮಾಜದಲ್ಲಿ ವಿವಿಧ ಕುಶಲ ಕರ್ಮಿಗಳ ಪಾತ್ರಗಳ ತಿಳುವಳಿಕೆ ಮತ್ತು ಜ್ಞಾನ ವನ್ನು ಕೊಡಬಲ್ಲರು. ಶೈಕ್ಷಣಿಕ ಕಾರ್ಯಕ್ರಮಗಳು ಸಮುದಾಯದ ಅಗತ್ಯಗಳು ಮತ್ತು ಅನುಭವಗಳಿಗೆ ಸಂಬಂಧಹೊಂದಿರಬೇಕು ಮತ್ತು ಅವರ ಆಯ್ಕೆಗಳಿಗೂ ಸೂಕ್ಷ್ಮ ಸಂವೇದನೆಯನ್ನು ಹೊಂದಿರಬೇಕು. ಎಲ್ಲ ಶಾಲೆ ಮತ್ತು ಎಲ್ಲ ಶಿಕ್ಷಕರೂ ಕಡ್ಡಾಯವಾಗಿ ಪಾಲಿಸಲೇಬೇಕಾದಂತಹ ಒಂದು ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಪಠ್ಯಕ್ರಮ ಚೌಕಟ್ಟನ್ನು ಅಭಿವೃದ್ಧಿಪಡಿಸುವ ಪ್ರಯತ್ನಕ್ಕೆ ಇದು ತದ್ವಿರುದ್ಧವೆಂಬುದನ್ನು ನೋಡಬಹುದು. ವಿವಿಧ ಶಾಲಾಮಟ್ಟದ ಆಯ್ಕೆಗಳು ಮತ್ತು ಬುನಾದಿ ಶಿಕ್ಷಣದ ತತ್ತ್ವಗಳ ಪುನಾರಚನೆಯ ಕಾರ್ಯಗಳು ಶಿಕ್ಷಣದ ಪರಿಕಲ್ಪಿತ ಚಿತ್ರದ ಭಾಗವಾಗಿರದ ಬಹುರೂಪತೆಯನ್ನು ಅಗತ್ಯಪಡಿಸುತ್ತವೆ. ಮತ್ತೆ ಅದು ಸಮುದಾಯದ್ದಷ್ಟೇ ಅಲ್ಲ ಬಹುಮುಖ್ಯವಾಗಿ ಶಿಕ್ಷಕರದ್ದೂ ವೈಯಕ್ತಿಕ ತೊಡಗಿಕೊಳ್ಳುವಿಕೆ, ತನ್ನದೆಂಬ ಭಾವ, ಮುನ್ನುಗ್ಗುವಿಕೆ ಮತ್ತು ಸೃಜನಶೀಲತೆಗಳನ್ನೂ ಇಲ್ಲವಾಗಿಸುತ್ತದೆ.

ಉ) ನೈತಿಕತೆ ಮತ್ತು ಕಾಳಜಿಗಳನ್ನು (ಹೃದಯ), ಪರಿಕಲ್ಪನೆ, ಕಾರ್ಯವಿಧಾನಗಳು ಮತ್ತು ತಾರ್ಕಿಕ ಕ್ಷಮತೆ (ಮಿದುಳು), ವಸ್ತು–ಪದಾರ್ಥಗಳನ್ನು ಉತ್ಪಾದಿಸುವ ಶಕ್ತಿ, ಸಾಮರ್ಥ್ಯ ಮತ್ತು ಸೃಜನಶೀಲತೆ (ಕೈ) ಇವೆಲ್ಲವುಗಳನ್ನೂ ಬೆಳೆಸುವ ಸಮಗ್ರ ಅನುಭವಗಳ ಬಳಕೆ. ಮಕ್ಕಳಿಗೆ ವಿವಿಧ ಕಸುಬುಗಳಲ್ಲಿ ತೊಡಗಿಕೊಳ್ಳುವ ಅವಕಾಶವನ್ನು ಒದಗಿಸಲು ಶಾಲೆಯು ಅಂತಹ ಚಟುವಟಿಕೆಗಳಲ್ಲಿ ಮಕ್ಕಳು ಭಾಗವಹಿಸಬಹುದಾದ ಪರಿಸರದಲ್ಲಿಯೇ ಇರಬೇಕು. ಅದಕ್ಕಾಗಿಯೇ ಸಮುದಾಯವು ಸುಲಭವಾಗಿ ಶಾಲೆಯೊಂದಿಗೆ ಒಡನಾಡಲು ಅನುಕೂಲವಾಗುವ ಸ್ಥಳದಲ್ಲಿಯೇ ಶಾಲೆಯು ಇರಬೇಕಾದುದು ಮುಖ್ಯ. ಈ ಅಂಶಗಳು ಯಾಂತ್ರಿಕ ಪರಿಗಣನೆಗಳಾದ ಕೊಠಡಿಯ ವಿಸ್ತೀರ್ಣ, ಮೈದಾನದ ವಿಸ್ತೀರ್ಣ ಇತ್ಯಾದಿಗಳಿಗಿಂತ ಹೆಚ್ಚು ಮುಖ್ಯ.

ಊ) ಮಕ್ಕಳಲ್ಲಿ ಆತ್ಮವಿಶ್ವಾಸ ಮತ್ತು ಸಾಮಾಜಿಕ ಬದ್ಧತೆಯನ್ನು ಬೆಳೆಸುವುದು, ಸಮುದಾಯದಲ್ಲಿ ಮತ್ತು ಶಾಲೆಯ ಕಾರ್ಯನಿರ್ವಹಣೆಯಲ್ಲಿ ಅವರ ಪಾತ್ರವನ್ನು ಕಂಡುಕೊಂಡು ಅದಕ್ಕೆ ಸಂಬಂಧಿಸಿದಂತೆ ಜವಾಬ್ದಾರಿಯನ್ನು ತೆಗೆದುಕೊಳ್ಳುವುದು.

ಮೇಲಿನ ತತ್ತ್ವಗಳ ಪ್ರಕಾರ, ಪ್ರಾಥಮಿಕ ಶಾಲೆಗಳಲ್ಲಿ ಅದರಲ್ಲಿಯೂ ಪ್ರಾಥಮಿಕ ತರಗತಿಗಳಲ್ಲಿ ಕಲಿಸಲು ಅದಕ್ಕೆಂದೇ ವಿಶೇಷವಾಗಿ ತಯಾರು ಮಾಡಬಹುದಾದ ಶಿಕ್ಷಕರನ್ನು ಸ್ಥಳೀಯ ಸಮುದಾಯದಿಂದಲೇ ತೆಗೆದುಕೊಳ್ಳಬೇಕಾದುದು ಮುಖ್ಯ. ಶಿಕ್ಷಣಶಾಸ್ತ್ರದ ಪದವಿಗಿಂತಲೂ ಹೆಚ್ಚು ಮುಖ್ಯವಾದದ್ದು ಸ್ಥಳೀಯ ಜ್ಞಾನ, ಬೋಧನಾ ಸಾಮರ್ಥ್ಯ, ಮಕ್ಕಳ ಸಂಸ್ಕೃತಿ, ಸಂಪ್ರದಾಯ ಮತ್ತು ಭಾಷೆಯ ಬಗ್ಗೆ ಪರಾನುಭೂತಿ ಹಾಗೂ ಅವುಗಳ ಅರಿವು.

## ಇಂದಿನ ಸಂದರ್ಭದಲ್ಲಿ ತತ್ತ್ವಗಳು

ಇಂದಿನ ಶೈಕ್ಷಣಿಕ ಸನ್ನಿವೇಶದಲ್ಲಿ ಇವುಗಳನ್ನು ಚಿತ್ರಿಸಿಕೊಳ್ಳುವುದು ಅಷ್ಟು ಸುಲಭವಲ್ಲ ಎನ್ನುವುದು ಸ್ಪಷ್ಟ. ಈಗಿನ ಪರಿಸ್ಥಿತಿಯಲ್ಲಿ ಸಮುದಾಯವು ಶಾಲಾ ಶಿಕ್ಷಣದ ಚಾಲಕ ಶಕ್ತಿಯಾಗುವುದು, ಅದಕ್ಕೆ ನೆರವು ನೀಡುವುದು ಹಾಗೂ ಅದರ ಒಡೆತನವನ್ನು ಹೊಂದುವುದು ಸಾಧ್ಯವೇ ಇಲ್ಲ. ಹಿಂದಿನ ಮೂರು ದಶಕ ಅಥವಾ ಅದಕ್ಕೂ ಹೆಚ್ಚಿನ ಅವಧಿಯಲ್ಲಿ ಸಮುದಾಯವನ್ನು ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ವಿವಿಧ ರೀತಿಯ ಕಾರ್ಯವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಈಗ ಸದ್ಯಕ್ಕೆ ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆಯು (RTE) ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ಪೋಷಕರನ್ನು ಪ್ರಮುಖ ಸದಸ್ಯರನ್ನಾಗುಳ್ಳ ಶಾಲಾ ಆಡಳಿತ ಸಮಿತಿಗಳು ಇರಬೇಕೆಂದು ಕಡ್ಡಾಯಗೊಳಿಸಿದೆ. ಶಿಕ್ಷಕರ ಹಾಜರಾತಿಯ ಮೇಲೆ ಕಣ್ಣಿಡಲು, ಶಾಲಾ ಕಟ್ಟಡಕ್ಕೆ ವಂತಿಗೆ ನೀಡಲು ಮತ್ತು ಅದರ ನಿರ್ಮಾಣದ ಉಸ್ತುವಾರಿ ನಡೆಸಲು, ಶಿಕ್ಷಕರೊಡಗೂಡಿ ಶಾಲೆಯ ಬೆಳವಣಿಗೆಗೆ ಯೋಜನೆಯನ್ನು ತಯಾರಿಸಲು ಮತ್ತಿತರ ಉದ್ದೇಶಗಳಿಗೆ ಸಮುದಾಯವನ್ನು ತೊಡಗಿಸಿಕೊಳ್ಳುವ ಯತ್ನಗಳು ನಡೆದಿವೆ.

ಸಮುದಾಯದ ಸಂಸ್ಕೃತಿ, ಭಾಷೆ ಮತ್ತು ಜ್ಞಾನಗಳನ್ನು ಸೇರಿಸಿಕೊಳ್ಳುವುದರ ಬಗ್ಗೆ ತಾಯಿನುಡಿಯ ಬಳಕೆ ಮತ್ತು ಬಹುಭಾಷಿಕತ್ವಗಳ ಬಗ್ಗೆ ಧ್ವನಿ ಎತ್ತಲು ಸಮುದಾಯವನ್ನು ಬಳಸಿಕೊಳ್ಳುವ ಸಣ್ಣ ಪುಟ್ಟ ಮತ್ತು ಸ್ವಲ್ಪ ಹೆಚ್ಚಿನ ಪ್ರಯತ್ನಗಳು ನಡೆದಿವೆ. ಎನ್.ಸಿ.ಎಫ್–2005 ಇವೆಲ್ಲವುಗಳ ಬಗ್ಗೆ, ಅಷ್ಟೇ ಅಲ್ಲದೇ ಕಸುಬುಗಾರಿಕೆಯ ಕಾರ್ಯಾನುಭವ, ಕೈದುಡಿಮೆಯನ್ನು ಗೌರವಿಸುವುದು ಇತ್ಯಾದಿಗಳನ್ನೊಳಗೊಂಡ ಸಮಗ್ರ ವ್ಯಕ್ತಿತ್ವದ ಬೆಳವಣಿಗೆಗೆ ಒತ್ತು ನೀಡುತ್ತದೆ. ಆದರೆ ಇವೆಲ್ಲವೂ ಬೃಹದಾಕಾರದ ಕೇಂದ್ರೀಕೃತ ಅಧಿಕಾರಶಾಹೀ ಚೌಕಟ್ಟನ್ನು ಅಲುಗಿಸದೇ ನಡೆಯುತ್ತಿರುವ ಅರೆ ಮನಸ್ಸಿನ ಪ್ರಯತ್ನಗಳೇ ಆಗಿವೆ. ನಿಜವಾಗಿ ಹೇಳಬೇಕೆಂದರೆ, ವಿಕೇಂದ್ರೀಕರಣದ ಬಗ್ಗೆ ಹೆಚ್ಚೆಚ್ಚು ಭಾಷಣಗಳ ನಡುವೆಯೇ

ಅಧಿಕಾರಶಾಹಿ ನಿಯಂತ್ರಣ ಮತ್ತು ನಿರ್ದೇಶನಗಳು ಹೆಚ್ಚಿವೆ ಮತ್ತು ಶಾಲೆಯಿಂದ ಇನ್ನಷ್ಟು ದೂರ ಸರಿದಿವೆ.

ಸಮುದಾಯ ಮತ್ತು ಮಕ್ಕಳೆಡೆಗೆ ನಿಜಕ್ಕೂ ಸಂವೇದನಾಶೀಲವಾಗಿರುವುದಕ್ಕಿಂತ ಹೆಚ್ಚಾಗಿ ಕೇಂದ್ರೀಕೃತ ಪ್ರಾಧಿಕಾರಗಳು ಯಾವ ವಿಷಯಗಳನ್ನು ಮುಖ್ಯ ಎಂದು ಬಗೆಯುತ್ತವೆಯೋ ಅದಕ್ಕೆ ತಕ್ಕುದಾದ ಸುಳ್ಳೋ ಪೊಳ್ಳೋ ಸಾಕ್ಷ್ಯಗಳನ್ನು ನೀಡುವುದಕ್ಕೆ ವ್ಯವಸ್ಥೆಯು ಕೆಲಸ ಮಾಡುತ್ತದೆ. ಶಿಕ್ಷಣದ ಪ್ರಕ್ರಿಯೆಯು ಸಮುದಾಯವನ್ನು ಒಳಗೊಳ್ಳದೇ ಇರುವುದರಿಂದ ಮತ್ತು ಕೇಂದ್ರ ನಿರ್ಧಾರಿತ ಕಾರ್ಯಕ್ರಮಗಳ ಕಾರಣ, ಅತ್ಯಂತ ಪರಕೀಯವಾಗುತ್ತಿದೆ (alienating). ಗ್ರಾಮ ಸಮುದಾಯವೇ ಶಾಲೆಗಳ ಆಡಳಿತವನ್ನು ನಿರ್ವಹಿಸುವಂತಹ ಶಾಲಾವ್ಯವಸ್ಥೆಯು ಸಾಧ್ಯವಾಗದೇ ಹೋದರೂ ಅಥವಾ ಅದು ಸಮಂಜಸ ಆಗಿಲ್ಲದೇ ಇದ್ದರೂ ಚುನಾಯಿತ ಪ್ರತಿನಿಧಿಗಳಿಗೆ ಶಾಲೆಯ ಆಡಳಿತವನ್ನು ಒಪ್ಪಿಸುವ ಎಲ್ಲ ಪ್ರಯತ್ನಗಳೂ ಅರೆಮನಸ್ಸಿನವೇ ಆಗಿದ್ದವು. ಹಾಗಾಗಿ, ಸಫಲವಾಗಲಿಲ್ಲ. ಬುನಾದಿ ಶಿಕ್ಷಣವು ಒಳಗೊಳ್ಳುವ ವಿಚಾರಗಳಿಗೆ ಇದು ಮೂಲಭೂತವಾಗಿ ವಿರುದ್ಧವಾಗಿದೆ. ಉದಾಹರಣೆಗೆ, ಸಮುದಾಯವನ್ನು ಆಡಳಿತಕ್ಕೆ ಬಹುಮುಖ್ಯ ಅಂಶವಾಗಿ ಅದರ ಆರ್ಥಿಕ ಚಟುವಟಿಕೆ, ಸಂಸ್ಕೃತಿ ಮತ್ತು ಕಾರ್ಯವೈಖರಿ ಸೇರಿದಂತೆಯೇ ತೊಡಗಿಸಿಕೊಳ್ಳುವುದರ ಸಾಧ್ಯತೆ. ಸಾರ್ವತ್ರಿಕವಾಗಿರಬೇಕಾದ, ಏಕರೂಪವಾಗಿರಬೇಕಾದ ಅಗತ್ಯತೆಯು ಶಿಕ್ಷಣ ವ್ಯವಸ್ಥೆಯನ್ನು ನಿಯಂತ್ರಿಸುತ್ತಿದೆ. ಅದು ವಿವಿಧತೆಯನ್ನು ಗುರುತಿಸದೇ, ಸರ್ವಸಮಾನತೆಯ ಭ್ರಾಂತಿಯನ್ನು ಉಂಟು ಮಾಡಲು ಪ್ರಯತ್ನಿಸುತ್ತದೆ. ಅದರ ದೊಡ್ಡಗಾತ್ರ ಮತ್ತು ಏಕರೂಪತೆಯ ಸವಾಲುಗಳು ಹಾಗೂ ತಿರುಚಿದ ಆಶೋತ್ತರಗಳು ಹಲವಾರು ವಿಕೃತಿಗಳಿಗೆ ಕಾರಣವಾಗಿವೆ. ವಿದ್ಯಾರ್ಥಿಗಳ ಸೋಸುವಿಕೆ ಕಾರ್ಯನಿರ್ವಹಣೆಯ ಸಂದರ್ಭದಲ್ಲಿ ನಿಜವಾದ ಒಳಗೊಳ್ಳುವಿಕೆಯನ್ನು ಪಾಲಿಸದೇ ಬಿಟ್ಟುಬಿಡುವುದು ಮತ್ತು ಅವಕಾಶ ವಂಚಿತ, ಕಡೆಗಣಿತ ಹಿನ್ನೆಲೆಯಿಂದ ಬಂದವರು, ಕಲಿಕೆಯ ವಿಷಯದಲ್ಲಿ ನ್ಯೂನತೆಯುಳ್ಳವರನ್ನು ನಿಷ್ಪಕ್ಷಪಾತವಾಗಿ ನಡೆಸಿಕೊಳ್ಳದೇ ಇರುವುದು ಇತ್ಯಾದಿ ಅಂತಹ ವಿಕೃತಿಗಳಲ್ಲಿ ಸೇರಿವೆ.

ಅವಕಾಶ ವಂಚಿತ ಹಿನ್ನೆಲೆಯಿಂದ ಬಂದವರು ಮೂಲಭೂತವಾಗಿ ಕಲಿಯಲು ತಕ್ಕವರೇ ಅಲ್ಲ, ಅವರಿಗಾಗಿ ಮಾಡುವ ಯಾವುದೇ ಹೆಚ್ಚಿನ ಪ್ರಯತ್ನವೂ ವ್ಯರ್ಥ ಎಂದು ಭಾವಿಸುವ ಮತ್ತು ನಂಬುವ ಮನಸ್ಥಿತಿಯ ವಿರುದ್ಧ ನಾವು ಹೋರಾಡುತ್ತಿದ್ದೇವೆ. ವಿದ್ಯಾಕಾರ್ಯಕ್ರಮದ ಗುಣಮಟ್ಟವು ಏನೇ ಇರಲಿ, ಬೇಡಿಕೆ ಇಲ್ಲದಿದ್ದರೆ ಯಾರೂ ವಿದ್ಯಾವಂತರಾಗುವುದಿಲ್ಲ ಎಂಬ ವಾದದೊಂದಿಗೆ ಕಲಿಕೆಯ ಹೊಣೆಯನ್ನು ಮಕ್ಕಳ ಮತ್ತು ಸಮುದಾಯದ ಮೇಲೆ ಹೇರುವುದು ಅದರರ್ಥ. 100–150 ವರ್ಷಗಳ ಹಿಂದೆ ಇದ್ದಂತೆಯೇ ಈಗ ಆಂಗ್ಲ ಭಾಷೆ ಮತ್ತು ಆಂಗ್ಲ ಮಾಧ್ಯಮದ ಶಿಕ್ಷಣಕ್ಕೆ ಬೇಡಿಕೆ ಇದೆ. ಇದು ಭ್ರಷ್ಟ, ವಿಕೃತ ಮನಸ್ಸುಗಳ ಕಾಲ್ಪನಿಕ ಬೇಡಿಕೆ ಎಂದು ತಳ್ಳಿಹಾಕುವುದು ಅನ್ಯಾಯ ಮತ್ತು ವಿವೇಕರಹಿತ. ನಿರಂತರವಾಗಿ ನಡೆಯುತ್ತಿರುವ ಕೇಂದ್ರೀಕೃತ ಉದ್ಯೋಗ ನೀಡಿಕೆ (placement) ಕೇಂದ್ರೀಕೃತ ಮೌಲ್ಯಮಾಪನಗಳು (assessment) ಮತ್ತು ಸ್ಪರ್ಧಾತ್ಮಕ ಸಾಧನೆಗಳ (performance) ನಡುವೆ, ಬುನಾದಿ ಶಿಕ್ಷಣದ ಸತ್ವವು ಶಾಲಾಶಿಕ್ಷಣ ಕಾರ್ಯಕ್ರಮದ ಭಾಗವಾಗಲಾರದು.

## ಬುನಾದಿ ಶಿಕ್ಷಣವನ್ನು ಕುರಿತಾದ ತಪ್ಪುಗ್ರಹಿಕೆಗಳು

ಬುನಾದಿ ಶಿಕ್ಷಣದ ಮೂಲತತ್ತ್ವ ಮತ್ತು ಉದ್ದೇಶಗಳನ್ನು ಮಕ್ಕಳ ಕಲಿಕೆಯನ್ನು ಹೋಲಿಸುವುದರ ಜೊತೆಗೆ, ಮಕ್ಕಳ ಕಲಿಕೆಯನ್ನು ವಿವಿಧ ಪ್ರದೇಶಗಳುದ್ದಗಲಕ್ಕೂ ಹೋಲಿಸುವುದರ ಜೊತೆಗೆ ಸರಿ ಹೊಂದಿಸುವುದು ಮತ್ತು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣಗಳು ಮುಂದಿನ ಉತ್ತಮ ವಿದ್ಯಾಭ್ಯಾಸದ, ಉತ್ತಮ ಅವಕಾಶಗಳ ಹೆಬ್ಬಾಗಿಲನ್ನಾಗಿಸುವುದಕ್ಕೆ ಕೇಂದ್ರೀಕರಿಸುವುದು ಸಾಧ್ಯವಿಲ್ಲ. ಬುನಾದಿ ಶಿಕ್ಷಣದ ಪ್ರಕಾರ, ಶಿಕ್ಷಣದ ಉದ್ದೇಶವು ಸೋಸುವಿಕೆ ಆಗಲಾರದು. ಶಾಲಾ ಶಿಕ್ಷಣವನ್ನು ಪರಿಣಾಮಕಾರೀ ವಿಂಗಡಣಾ ಯಂತ್ರವನ್ನಾಗಿ ಪರಿಭಾವಿಸಿರುವುದು ಬುನಾದಿ ಶಿಕ್ಷಣದ ಬಗ್ಗೆ ಅನೇಕ ತಪ್ಪು ಗ್ರಹಿಕೆಗಳಿಗೆ ಎಡೆಮಾಡಿಕೊಟ್ಟಿದೆ.ಕೆಲಸ ಮತ್ತು ಶಿಕ್ಷಣ ಹಾಗೂ ಸಮುದಾಯದ ಒಳಗೊಳ್ಳುವಿಕೆಯನ್ನು ಸಮರ್ಥಿಸುವ ತತ್ತ್ವ ಮತ್ತು ಮೂಲೋದ್ದೇಶಗಳ ಬಗ್ಗೆ ಗೊಂದಲವುಂಟುಮಾಡುತ್ತವೆ. ಉದಾಹರಣೆಗೆ, ಕೆಳಗಿನವುಗಳಲ್ಲಿ ಯಾವುದೇ ಒಂದು ಅಥವಾ ಎಲ್ಲ ಅರ್ಥದಲ್ಲಿಯೂ ಅದನ್ನು ತೆಗೆದುಕೊಳ್ಳಬಹುದು:

ಅ) ಇದು ಗ್ರಾಮೀಣ ಮತ್ತು ಬಡ ಮಕ್ಕಳಿಗೆ ಇರುವಂತಹ ಶಿಕ್ಷಣ. ಈ ಮಕ್ಕಳು ತಮ್ಮ ಕೈಗಳನ್ನು ಉಪಯೋಗಿಸಿ ಕೆಲಸ ಮಾಡುವುದನ್ನು ಕಲಿಯಬೇಕಾದ್ದರಿಂದ ಇವರಿಗೆ ಈ ತರಹದ ಶಿಕ್ಷಣದ ಅವಶ್ಯಕತೆ ಇದೆ.

ಆ) ಮಾತೃಭಾಷೆಯನ್ನು ಉಪಯೋಗಿಸುವುದೆಂದರೆ ಮಗುವಿನ ನಿಕಟ ಕುಟುಂಬದವರು ಮಾತನಾಡುವ, ಮುಖ್ಯವಾಗಿ ಪ್ರಾಥಮಿಕ ಪಾಲನೆಯನ್ನು ಒದಗಿಸುತ್ತಿರುವವರ ಭಾಷೆಯನ್ನು ಮಾತ್ರ ಉಪಯೋಗಿಸುವುದು.

ಇ) ಚರಕ ಬಳಸುವುದು ಮತ್ತು ಇನ್ನಿತರ ಅಂತಹುದೇ ವೃತ್ತಿಗಳ ಕಲಿಕೆಯು ಪಠ್ಯಕ್ರಮದಲ್ಲಿ ಸೇರಿರಬೇಕು ಹಾಗೂ ಹೊಸ ವಿಚಾರಗಳನ್ನು, ಹೊಸ ದಿಶೆಗಳನ್ನು ಗ್ರಹಿಸಿ, ಮೈಗೂಡಿಸಿಕೊಳ್ಳದಂತೆ ತಡೆಯಬೇಕು. ಶಾಲೆಯಲ್ಲಿ ಕಲಿಸಲು ಆಯ್ದುಕೊಂಡ ಕಸುಬು ಮತ್ತು ವೃತ್ತಿಗಳು, 70 ವರ್ಷಗಳ ಹಿಂದೆ, ಬುನಾದಿಶಿಕ್ಷಣದ ಚಿಂತನೆಗಳು ಭಾರತದಲ್ಲಿ ಅಭಿವೃದ್ಧಿಗೊಳ್ಳುತ್ತಿದ್ದ ಸಮಯದಲ್ಲಿ ಇದ್ದ ವಿಚಾರಗಳಲ್ಲೇ ಬೇರೂರಿರಬೇಕು.

ಈ) ಶಾಲೆಯ ಉತ್ಪತ್ತಿಯಿಂದ ಬಂದ ವರಮಾನದಿಂದಲೇ ಶಾಲೆಯ ನಿರ್ವಹಣೆ ನಡೆಯಬೇಕು.

ಉ) ಶಾಲೆಯಲ್ಲಿ ನಡೆಯುವ ಎಲ್ಲ ಚಟುವಟಿಕೆಗಳೂ ಒಂದಕ್ಕೊಂದು ಸಂಬಂಧಿಸಿದ್ದಾಗಿರಬೇಕು ಮತ್ತು ವಿವಿಧ ಕಸುಬುಗಳನ್ನು ಮಾಡಿಸುವುದರ ಮೂಲಕ ಕಲಿಸಿದ ಪರಿಕಲ್ಪನೆಗಳಿಗೆ ಸಂಬಂಧಿಸಿರಬೇಕು.

ಊ) ಬುನಾದಿ ಶಿಕ್ಷಣವೆಂದರೆ ಮಕ್ಕಳನ್ನು ವೃತ್ತಿಗಾಗಿ ಅಣಿಗೊಳಿಸುವುದು ಮತ್ತು ವೃತ್ತಿಶಿಕ್ಷಣಕ್ಕೆ ಇದು ಪೀಠಿಕೆಯಾಗಿದೆ.

ಋ) ಬುನಾದಿ ಶಿಕ್ಷಣವು ಕೇವಲ ಪ್ರಾಥಮಿಕ ಹಂತದವರೆಗೆ ಮಾತ್ರ ಹಾಗೂ ಅದರ ತತ್ತ್ವಗಳು ಮಾಧ್ಯಮಿಕ ಮತ್ತು ಪ್ರೌಢಶಾಲಾ ಶಿಕ್ಷಣಕ್ಕೆ ಉಪಯುಕ್ತವಲ್ಲ. ಉನ್ನತ ಶಿಕ್ಷಣದಲ್ಲಿ ಅದಕ್ಕೆ ಯಾವುದೇ ಅರ್ಥವಿಲ್ಲ.

ಇವಾವುವೂ ಸರಿಯಲ್ಲ ಮತ್ತು ಕೆಲವಂತೂ ಬುನಾದಿ ಶಿಕ್ಷಣದ ಆಶಯಕ್ಕೇ ತದ್ವಿರುದ್ಧವಾಗಿವೆ. ಇನ್ನುಳಿದ ಕೆಲವು, ಕೇವಲ ಬುನಾದಿ ಶಿಕ್ಷಣದ ಬಾಹ್ಯರೂಪವನ್ನು ಕುರಿತು ಹೇಳುತ್ತವೆಯೇ ಹೊರತು ಅದರ ಸತ್ವವನ್ನು ಕುರಿತಲ್ಲ. ಹಲವರಲ್ಲಿ ಇದೊಂದು ಮೂಲ ಕಲ್ಪನೆಯಾಗಿ ಒಡಮೂಡಲು ಕಾರಣ ಬುನಾದಿ ಶಿಕ್ಷಣದ ಚಿಂತನೆಗಳು ಮೂಡಿದ್ದು ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ, ಪ್ರತಿರೋಧವನ್ನು ಬೆಳೆಸುವ ಮತ್ತು ಬೆಂಬಲಿಸುವ ಸಾಧನವಾಗಿ, ಆದ್ದರಿಂದ, ಒಂದು ರೀತಿಯಲ್ಲಿ ಪ್ರತಿರೋಧದ ಪ್ರತೀಕವಾಗಿದ್ದ ಆರ್ಥಿಕ ಮತ್ತಿತರ ಅಂಶಗಳು ಅವುಗಳಲ್ಲಿ ಹುದುಗಿವೆ ಎಂಬುದು. ಬುನಾದಿ ಶಿಕ್ಷಣದ ಪಠ್ಯಕ್ರಮ ಮತ್ತು ಆದರ್ಶಗಳು, ರಾಷ್ಟ್ರೀಯತೆ ಮತ್ತು ಒಂದು ನಿರ್ದಿಷ್ಟ ರೀತಿಯ ರಾಷ್ಟ್ರೀಯ ಪ್ರತೀಕಗಳ ಸುತ್ತಮುತ್ತಲೇ ವಿಕಸಿತವಾದವು. ಇನ್ನಿತರ ವಿಚಾರಗಳ ಜೊತೆಗೆ ಅವುಗಳನ್ನೂ ಮೈದುಂಬಿಸುತ್ತಿದ್ದವು. ಅದೊಂದು, ಶಿಕ್ಷಣವು ಹೆಚ್ಚಿನಂಶ 'ಸಮುದಾಯ'ದ ಪಾಲ್ಗೊಳ್ಳುವಿಕೆಯ ನಿಯಂತ್ರಣದಲ್ಲಿರುವ ಮತ್ತು ಸರ್ಕಾರದ ಕನಿಷ್ಠ ಪಾತ್ರವನ್ನಷ್ಟೇ ಹೊಂದಿರಬೇಕಾದ ಶಿಕ್ಷಣ ಪ್ರಕ್ರಿಯೆ. ಶಾಲಾ ವ್ಯವಸ್ಥೆ ವಿಸ್ತರಿಸುತ್ತಾ ಹೋದಂತೆ, ಸಮುದಾಯವು ಅದಕ್ಕಾಗಿ ಸಿದ್ಧವಾಗಿಲ್ಲದ ಕಡೆಗಳಲ್ಲಿಯೂ ಶಾಲೆಯನ್ನು ಸ್ಥಾಪಿಸಬೇಕಾದ ಅಗತ್ಯವಿದ್ದ ಕಾರಣ, ಈ ಎಲ್ಲ ಚಿಂತನೆಗಳನ್ನು ಬಹಳವೇ ಪೇಲವಗೊಳಿಸಬೇಕಾಯಿತು. ತತ್ತ್ವಗಳು ಮತ್ತು ವಾಸ್ತವಿಕತೆ ಹೀಗಿರುವ ಹಿನ್ನೆಲೆಯಲ್ಲಿ, ಬುನಾದಿ ಶಿಕ್ಷಣದ ಆದರ್ಶಗಳನ್ನು ಕಾರ್ಯಗತಗೊಳಿಸುವಾಗ ಅವು ಗಮನಾರ್ಹವಾಗಿ ತಿರುಚಿ ಹೋಗಿರುವುದು ಆಶ್ಚರ್ಯದ ಸಂಗತಿಯೇನಲ್ಲ.

## ಅನುಕ್ರಮ ದರ್ಜೆ, ಅಂತರ ಮತ್ತು ಕೇಂದ್ರೀಕರಣ

ಶಾಲೆ ಹಾಗೂ ಶಿಕ್ಷಕರ ಬಗ್ಗೆ ನಂಬಿಕೆ ಮತ್ತು ಅವರ ಕರ್ತೃತ್ವವನ್ನು ಅದರ ಪರಿಶೀಲನೆಗಾಗಿ ಹೊರಗಿನ ಪರೀಕ್ಷೆಯನ್ನೂ ನಡೆಸುವ ಪರಿವೀಕ್ಷಕನ ಅವಲೋಕನ ಮತ್ತು ಅಭಿಪ್ರಾಯಕ್ಕೆ ಅಡಿಯಾಳಾಗಿ ನೋಡುವ ಕೇಂದ್ರೀಕೃತ ವ್ಯವಸ್ಥೆಯ ಅಂತರ್ಗತ ಸ್ವರೂಪವು ಇದು ಸ್ಥಳೀಯರಿಗೆ ಸ್ಪಷ್ಟವಾಗಿ ಕಾಣುವ ಮತ್ತು ನಿರ್ವಹಣೆಯ ಹೆಚ್ಚು ಅಂಶವನ್ನು ಹೊಂದಿರುವ ಶಿಕ್ಷಣದ ಮೂಲ ಆಶಯಕ್ಕೆ ಸರಿಹೊಂದುವುದಿಲ್ಲ. ಸ್ವಾತಂತ್ರ್ಯಪೂರ್ವ ಸನ್ನಿವೇಶದಲ್ಲಿ ಮೂಡಿಬಂದ ಅಂತಹ ಶಿಕ್ಷಣ ಪದ್ಧತಿಗಳು ಶಾಲೆಗಳು ಸ್ವಯಂ ನಿರ್ದೇಶಿತ ಪ್ರೇರಣೆ ಮತ್ತು ಉದ್ದೇಶ ಹೊಂದಿರಬೇಕೆಂದು ಒತ್ತು ನೀಡಿದವು. ಅವುಗಳ ಉತ್ಸಾಹ ಮತ್ತು ಪ್ರಯತ್ನಶೀಲತೆ ಬಂದಿದ್ದು, ವೈಯಕ್ತಿಕ ಹಾಗೂ ಸಮಷ್ಟಿನೋಟಗಳನ್ನು ಜವಾಬ್ದಾರಿಯುತವಾಗಿ ಮತ್ತು ಆಯ್ಕೆಗಳನ್ನು ಮಾಡಿಕೊಳ್ಳಲು ಅವಕಾಶವೆಂಬ ರೀತಿಯ ಅವಗಾಹನೆಯಿಂದ. ಹಾದಿಯಲ್ಲಿ ಎದುರಿಸಬೇಕಾಗಿ ಬಂದ ಸವಾಲುಗಳು ಅಡಚಣೆಗಳಾಗಿರಲಿಲ್ಲ, ಸ್ವನಿರ್ದೇಶಿತ ಸವಾಲುಗಳಿಂದ ಹೊಮ್ಮಿದ ಕಾರಣ ಉಂಟಾದ ವಿದ್ಯಮಾನಗಳಾಗಿದ್ದವು. ಸೃಜನಶೀಲ ಸಂವೇದನೆ, ಹೊಸ ಕಲಿಕೆಯ ಮತ್ತು ಹಂಚಿಕೊಳ್ಳುವಿಕೆಯ ಉತ್ಸಾಹ ಅಲ್ಲಿತ್ತು. ಅರ್ಥಪೂರ್ಣವಾದದ್ದೇನನ್ನೋ ಅತೀಮುಖ್ಯವಾದದ್ದೇನನ್ನೋ ತಾವು ಮಾಡುತ್ತಿದ್ದೇವೆ ಎಂಬ ಭಾವನೆ ಅವರಲ್ಲಿತ್ತು ಮತ್ತು ತಮ್ಮ ಪ್ರಯತ್ನಗಳ ಪರಿಣಾಮಗಳನ್ನು ಕೂಡ ಅವರು ಕಾಣಬಹುದಿತ್ತು. ಅವರು ಉತ್ಕೃಷ್ಟ ವಿಧಾನಗಳನ್ನೇ, ಅತ್ಯುತ್ತಮ ವಿಧಾನಗಳು, ಕಾರ್ಯತಂತ್ರಗಳನ್ನೇ ಅವರು ಬಳಸುತ್ತಿದ್ದರು ಅಂತೇನಿಲ್ಲ. ಆದರೆ ಅದು ಅವರಿಗೆ ಮತ್ತು ವಿದ್ಯಾರ್ಥಿಗಳಿಗೆ ಅತ್ಯುತ್ತಮವಾದುದಾಗಿತ್ತು. ಏಕೆಂದರೆ, ಅವರಿಗೆ ಅದರಲ್ಲಿ ನಂಬುಗೆ ಇತ್ತು, ಅದಕ್ಕೂ ಹೆಚ್ಚಾಗಿ ತಾವೇ ರೂಪಿಸಿದ್ದೆಂಬ ಕಾರಣಕ್ಕಾಗಿ ಅದು ತಮ್ಮದೆಂಬ ಭಾವನೆಯಿತ್ತು.

ಕೇಂದ್ರೀಕೃತ ಅಧಿಕಾರದಿಂದಾಗಿ ಔಪಚಾರಿಕತೆ, ವಿಚಾರವಾದಿತ್ವ, ತಜ್ಞತ್ವ, ಉದ್ಧಟತನ ಮತ್ತು ಅಗೌರವಗಳು ಹೆಚ್ಚುತ್ತಿರುವ ಕಾರಣ ಇಲ್ಲಿನ ಬಹಳಷ್ಟು ಆಲೋಚನೆಗಳನ್ನು, ತತ್ತ್ವಗಳನ್ನು ಮೂರ್ತರೂಪದಲ್ಲಿ ಪರಿಭಾವಿಸಲು ಕಾರಣವಾಗಿವೆ. ಶಿಕ್ಷಣ, ಕಲಿಕೆ, ಸಮಾಜ ಇವುಗಳ ಕುರಿತಾಗಿ ಹೆಚ್ಚುತ್ತಿರುವ ಪರಿಜ್ಞಾನವು ಶಿಕ್ಷಣವನ್ನು ನೀಡಲು ನಿಜಕ್ಕೂ ಯಾರು ಜವಾಬ್ದಾರರೋ ಅವರನ್ನು ಮತ್ತು ಅದರ ಅತೀ ದೊಡ್ಡ ಹಿತಾಸಕ್ತಿದಾರರನ್ನು ಬಹಳ ಹಿಂದೆಯೇ ಬಿಟ್ಟು ಬಿಡುತ್ತಿದೆ. ಬೃಹತ್ ಗಾತ್ರದ ಕೇಂದ್ರೀಕೃತ ವ್ಯವಸ್ಥೆಯು ಇವರಿಬ್ಬರಲ್ಲಿ ಯಾವ ಗುಂಪನ್ನೂ ಗೌರವಿಸಲು ಅಸಮರ್ಥವಾಗಿದೆ. ಅವರು ತಮ್ಮ ಪಾತ್ರ, ಜವಾಬ್ದಾರಿಗಳನ್ನು ಅರಿಯಲು ಮತ್ತು ಅವುಗಳನ್ನು ನಿರ್ವಹಿಸಲು ಅವರು ಹೊಂದಿರುವ ಅಧಿಕಾರವನ್ನು ಕುರಿತಾಗಿ ಪ್ರಜ್ಞೆ ಮೂಡಿಸಲು ವಿಫಲವಾಗಿದೆ. ಬುನಾದಿ ಶಿಕ್ಷಣದ ಶೈಕ್ಷಣಿಕ ಸಿದ್ಧಾಂತಗಳ ಆಧಾರ ತತ್ತ್ವವು ಮೂಲಭೂತವಾಗಿ ಇಡೀ ವ್ಯವಸ್ಥೆಯ ಪುನಾರಚನೆಯನ್ನು ಬಯಸುತ್ತದೆ. ನಮಗೆ ಸ್ಥಳೀಯ ನಿಯಂತ್ರಣ ಬೇಕೋ ಅಥವಾ ಸ್ಥಳೀಯ ನಿಯಂತ್ರಣವು

ವಿಕೃತಿಗಳಿಗೆ ಎಡೆಮಾಡಿಕೊಡುತ್ತದೆ, ಆಧುನೀಕರಣದ ಕಾರ್ಯಕ್ರಮಕ್ಕೆ ವಿರುದ್ಧವಾಗುತ್ತದೆ ಎಂದು ಚಿಂತಿಸಬೇಕೋ ಎನ್ನುವುದು ಚರ್ಚಾಸ್ಪದ ವಿಷಯ. ಹಾಗಿದ್ದಲ್ಲಿ, ಮತ್ತು ನಾವೇನಾದರೂ ಶಿಕ್ಷಣದ ಸರ್ಕಾರೀ ನಿಯಂತ್ರಣದಲ್ಲಿ ವಿಶ್ವಾಸವುಳ್ಳವರೇ ಆದಲ್ಲಿ ಬುನಾದಿ ಶಿಕ್ಷಣದ ಪರಿಕಲ್ಪನೆಯು ಮುಂದೆ ಸಾಗಲು ಅತ್ಯುತ್ತಮ ಮಾರ್ಗವಾಗಲಾರದು.

**ಹೃದಯಕಾಂತ್ ದಿವಾನ್** ಅವರು ಪ್ರಸ್ತುತ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಅವರು ಏಕಲವ್ಯದ ಸ್ಥಾಪಕ ಗುಂಪಿನ ಸದಸ್ಯರಾಗಿ ಮತ್ತು ಉದಯಪುರದ ವಿದ್ಯಾ ಭವನ ಸೊಸೈಟಿಯ ಶೈಕ್ಷಣಿಕ ಸಲಹೆಗಾರರಾಗಿ ಕೆಲಸ ಮಾಡಿದ್ದಾರೆ. ಅವರು ಕಳೆದ 40 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ವಿಭಿನ್ನ ರೀತಿಗಳಲ್ಲಿ ಮತ್ತು ವಿಭಿನ್ನ ಅಂಶಗಳಲ್ಲಿ ಕಾರ್ಯನಿರ್ವಹಿಸುತ್ತಾ ಬಂದಿದ್ದಾರೆ. ವಿಶೇಷವಾಗಿ ಅವರು ಶೈಕ್ಷಣಿಕ ನಾವೀನ್ಯತೆ ಮತ್ತು ರಾಜ್ಯ ಶಿಕ್ಷಣದ ಸಂರಚನೆಗಳ ಮಾರ್ಪಾಡುಗಳ ಪ್ರಯತ್ನಗಳೊಡನೆ ಸಂಬಂಧ ಹೊಂದಿದ್ದಾರೆ.ಅವರನ್ನು hardy.dewan@gmail.com ನಲ್ಲಿ ಸಂಪರ್ಕಿಸಬಹುದು.
**ಅನುವಾದಕರು**: ಜನಾರ್ಧನ್, **ಪರಿಶೀಲನೆ**: ಸಹನಾ ಹೆಗ್ಗಡೆ.